ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2018 ಮಾಸ ಪತ್ರಿಕೆ

ಸಂಪುಟ/Volume : 40
ಸಂಚಿಕೆ/Issue : 6
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachara | March 2018 | Monthly




## ರಾಮಂಗೆ ಮೊದಲಲ್ತೆ ರಾಮಾಯಣಂ?
## ಮುನ್ನಲ್ತೆ, ಪಿರಿದಲ್ತೆ, ಮೆಯ್ಯಲ್ತೆ, ಮನೆಯಲ್ತೆ ರಾಮಾಯಣಂ?


A Journal of Karnataka State Secondary Teachers' Association

# ಸಂಪಾದಕೀಯ

'ಶಿಕ್ಷಕ ಸಮಾಚಾರ'ದ ಎಲ್ಲಾ ಓದುಗರು, ಶಿಕ್ಷಕಮಿತ್ರರು ಹಾಗೂ ವಿದ್ಯಾರ್ಥಿಗಳಿಗೆ ಹೊಸವರ್ಷ ವಿಳಂಬಿ ಸಂವತ್ಸರದ, ಯುಗಾದಿ ಹಬ್ಬದ ಶುಭಾಶಯಗಳು. ಪತ್ರಿಕೆ ನಿಮ್ಮ ಕೈ ಸೇರುವಷ್ಟರಲ್ಲಿ ಹೇವಿಳಂಬಿ ಪಕ್ಕಕ್ಕೆ ಸರಿದು ವಿಳಂಬಿ ಸಂವತ್ಸರ ಕಾಲಿಟ್ಟಿರುತ್ತದೆ. ಈ ಸಂವತ್ಸರವು ವಿಳಂಬವಿಲ್ಲದೆ ನಮ್ಮೆಲ್ಲ ಆಶೋತ್ತರಗಳನ್ನು ಈಡೇರಿಸುವುದೆಂಬ ವಿಶ್ವಾಸದೊಂದಿಗೆ ಈ ಹೊಸವರ್ಷವನ್ನು ಬರಮಾಡಿಕೊಳ್ಳೋಣ. ನಾವೆಲ್ಲ ಸಾಮಾನ್ಯವಾಗಿ ವ್ಯಾವಹಾರಿಕ ಹೊಸವರ್ಷ ಜನವರಿ 1 ಅನ್ನು ಸಂಭ್ರಮದಿಂದ ಆಚರಿಸುತ್ತೇವೆ. ಆದರೆ ನಮ್ಮ ಹೊಸವರ್ಷ ಯುಗಾದಿಯಂದು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವುದೂ ನಮಗೆ ನೆನಪಿಗೆ ಬರುವುದಿಲ್ಲ. ಆದರೆ ನಾವು ಹಾಗೆ ಮಾಡುವುದಿಲ್ಲ. ಮಾರ್ಚ್ 18ರಂದು ಯುಗಾದಿ. ಅಂದು ನಾವು ನಮ್ಮ ಬಂಧುಗಳಿಗೆ, ಸ್ನೇಹಿತರಿಗೆ, ವಿದ್ಯಾರ್ಥಿಗಳಿಗೆ ಶುಭಾಶಯ ವಿನಿಮಯ ಮಾಡಿಕೊಂಡು ಹೊಸವರ್ಷವನ್ನು ಸ್ವಾಗತಿಸಿದ್ದೇವೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಜಿಲ್ಲಾ ಘಟಕಗಳೂ ಕ್ಯಾಲೆಂಡರನ್ನು ಮುದ್ರಿಸಿ ಶಿಕ್ಷಕ ಮಿತ್ರರಿಗೆ, ಸೇಹಿತರಿಗೆ ವಿತರಿಸಬಹುದು. ಯುಗಾದಿಯ ವಿಶೇಷವೆಂದರೆ ಕೇವಲ ದಿನಾಂಕ ಬದಲಾವಣೆಯಾಗದೆ ಪ್ರಕೃತಿಯಲ್ಲೂ ಹೊಸತನವನ್ನು ಕಾಣುತ್ತೇವೆ. ವಸಂತ ಋತುವಿನ ಚಿಗುರು, ಮರಗಿಡಗಳಲ್ಲಿ, ಹೊಸ ಹುರುಪು ಪಕ್ಷಿಗಳಲ್ಲಿ ಕಾಣುತ್ತೇವೆ. ಯುಗಯುಗಾದಿ ಕಳೆದರೂ ಯುಗಾದಿಮರಳಿ ಬರುತ್ತದೆ. ಆದರೆ ಪ್ರತಿವರ್ಷವೂ ಹೊಸ ಚೈತನ್ಯದೊಂದಿಗೆ ಆಗಮಿಸುತ್ತದೆ. ಆ ಚೈತನ್ಯ, ಉತ್ಸಾಹ ನಮ್ಮಲ್ಲೂ ಮೂಡಿಸಿಕೊಂಡು ನೂತನ ಹುರುಪಿನೊಂದಿಗೆ ಕಾರ್ಯನಿರತರಾಗೋಣ.

ನಾಡಿನ ಜನತೆಗೆ ಜೀವನ ದರ್ಶನವನ್ನು, ಗಹನವಾದ ತತ್ತ್ವಗಳನ್ನು, ವಿಚಾರಗಳನ್ನು 'ಮಂಕುತಿಮ್ಮನ ಕಗ್ಗ'ದ ಮೂಲಕ ನೀಡಿದವರು ಡಾ|| ಡಿ.ವಿ. ಗುಂಡಪ್ಪನವರು. ಡಿ.ವಿ.ಜಿ.ಯವರು ಜನಿಸಿದ್ದು ಮಾರ್ಚ್ 17ರಂದು. ಅಂತೆಯೇ ಕನ್ನಡದ ಮತ್ತೊಬ್ಬ ವಿಶಿಷ್ಟ ಕವಿ 'ಪುತಿನ'ರವರು. ಇವರು ಜನಿಸಿದ್ದೂ ಮಾರ್ಚ್ 17 ರಂದೇ. ಕನ್ನಡದ ಮೊದಲ ರಾಷ್ಟ್ರಕವಿ ಎಂ. ಗೋವಿಂದ ಪೈ ಇವರು ಜನಿಸಿದ್ದು ಮಾರ್ಚ್ 23 ರಂದು. ಹಾಗೆಯೇ ಕನ್ನಡದ ಖ್ಯಾತ ವಿದ್ವಾಂಸರಾದ ಮುಳಿಯ ತಿಮ್ಮಪ್ಪಯ್ಯನವರು ಜನಿಸಿದ್ದೂ ಮಾರ್ಚ್ ತಿಂಗಳಲ್ಲಿಯೇ. ನವ್ಯ ಸಾಹಿತ್ಯದ ಕತೆಗಾರ ಹಾಗೂ ನಾಟಕಕಾರ ಪಿ. ಲಂಕೇಶ್ ಈ ತಿಂಗಳಿನಲ್ಲಿಯೇ ಜನಿಸಿದ್ದು. ಕನ್ನಡ ಸಾಹಿತ್ಯ ಸಾಧಕರುಗಳಾದ ಜಿ.ಪಿ. ರಾಜರತ್ನಂ, ಯಶವಂತ ಚಿತ್ತಾಲರು, ಶಾಂತಿನಾಥ ದೇಸಾಯಿಯವರು ಮರಣಿಸಿದ್ದು ಮಾರ್ಚ್‌ನಲ್ಲಿ. ಈ ಸಂದರ್ಭದಲ್ಲಿ ಈ ಎಲ್ಲಾ ಸಾಧಕರ ಸಾಹಿತ್ಯ ಸಾಧನೆಯನ್ನು ಓದುವ ಮೂಲಕ ಸ್ಮರಿಸಿ ಗೌರವಿಸೋಣ.

ಶಿಕ್ಷಕ ಸಮಾಚಾರ' ಕಳೆದ 40 ವರ್ಷಗಳಿಂದ ಒಂದು ತಿಂಗಳೂ ತಪ್ಪದೆ ನಿಗದಿತ ದಿನಾಂಕದಂದೇ ಓದುಗರ ಕೈ ಸೇರುತ್ತಿದೆ. ಒಂದು ಪತ್ರಿಕೆಯನ್ನು, ಅದರಲ್ಲೂ ಸಂಘದ ಪತ್ರಿಕೆಯನ್ನು ಇಷ್ಟು ದೀರ್ಘ ಕಾಲ ಯಶಸ್ವಿಯಾಗಿ ನಡೆಸಿಕೊಂಡು ಬರುವುದು ಸಾಹಸವೇ ಸರಿ. ಅದಕ್ಕಾಗಿ ಪತ್ರಿಕೆಯ ಆರಂಭದಿಂದ ಇಲ್ಲಿಯವರೆಗೆ ಶ್ರಮಿಸಿದ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬೇಕು. ಇಂತಹ ಹೆಗ್ಗಳಿಕೆಯ ಶಿಕ್ಷಕ ಸಮಾಚಾರ ಪತ್ರಿಕೆಗೆ ಕಳೆದ 5 ವರ್ಷಗಳಿಂದ ಸಹಸಂಪಾದಕನಾಗಿ ಕೆಲಸಮಾಡುವ ಸದವಕಾಶ ನನಗೆ ದೊರೆಯಿತು. ಈಗ ವೈಯುಕ್ತಿಕ ಕಾರಣಗಳಿಗಾಗಿ ಪತ್ರಿಕೆಯ ಕೆಲಸದಿಂದ ವಿರಮಿಸುತ್ತಿದ್ದೇನೆ. ಏಪ್ರಿಲ್ ತಿಂಗಳಿನಿಂದ ಶಿಕ್ಷಕ ಸಮಾಚಾರ ಹೊಸ ಸಂಪಾದಕರ ನೇತೃತ್ವದಲ್ಲಿ ಹೊರಬರಲಿದೆ. ಪತ್ರಿಕೆಯ ಸಹಸಂಪಾದಕತ್ವದ ಜವಾಬ್ದಾರಿಯನ್ನು ಹೊಸ ಉತ್ಸಾಹ, ಹುರುಪುಗಳೊಂದಿಗೆ ನಿರ್ವಹಿಸುವವರು ಶ್ರೀಮತಿ ಮಮತಾ. ಡಿ. ಕೆ. ಹೊಸ ಸಂಪಾದಕರ ನೇತೃತ್ವದಲ್ಲಿ ಶಿಕ್ಷಕ ಸಮಾಚಾರ ಹೆಚ್ಚು ಆಕರ್ಷಕವಾಗಿ ಹಾಗೂ ವೈವಿಧ್ಯಮಯವಾಗಿ ಹೊರಬರುತ್ತದೆಂಬ ವಿಶ್ವಾಸ ನಮ್ಮದು.

ಎನ್. ನಾಗರಾಜ್

## ಸೂಕ್ತಿ



ತ್ಯಾಗಬುದ್ಧಿಯಲಿ, ನಿರ್ವೇಗದಲಿ, ತಪದಲ್ಲಿ,
ಸಂಯಮದ ಸೌಂದರ್ಯದಲ್ಲಿ,
ನಿರಸೂಯೆಯಲಿ,
ರಸಕಾವ್ಯ ಸತ್ಕಲಾಭ್ಯಾಸದಧ್ಯಾತ್ಮದಲಿ,
ಸೋದರ ಪ್ರೀತಿಯಲಿ,
ಬಾಲಋಷಿಯೆಂಬಂತೆ
ಭಾಜನನಾಗಿ ರಾಮಗೌರವಕೆ.

- ಕುವೆಂಪು, ರಾಮಾಯಣದರ್ಶನಂ

## ಪರಿವಿಡಿ


- ಸಾಮಾಜಿಕ ಸಾಮರಸ್ಯಕ್ಕೆ – ರಾಮಾಯಣ 3
- ಶಬರಿಯ ಭಕ್ತಿ – ಭಗವಂತನಿಗೆ ಪ್ರೀತಿ 5
- ಸಂಕಲ್ಪ ದಿನಾಚರಣೆ 6
- ರವೀಂದ್ರನಾಥ ಟಾಗೋರ್ 7
- ಸಮಾನ ವೇತನಕ್ಕೆ ಆಗ್ರಹ 9
- ತರಗತಿ 10 ಮತ್ತು 12ರ ನಂತರ ಮುಂದೇನು? 9
- ಸಮಾಜಕ್ಕೇನಾಯ್ತು? 10
- ಬೇಸಿಗೆ ರಜೆಯ ಸದುಪಯೋಗ ಹೇಗೆ? 11
- ಚಿತ್ರಪುಟ 12

# ಸಾಮಾಜಿಕ ಸಾಮರಸ್ಯಕ್ಕೆ – ರಾಮಾಯಣ

## (ಸಾಮಾಜಿಕ ಸಾಮರಸ್ಯದ ನಿರಂತರ ಹರಿಕಾರ)

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಶ್ರೀಮದ್ ರಾಮಾಯಣದ ಕಥೆಗೆ ಪರ್ವತಗಳು ಭೂಮಂಡಲದ ಮೇಲೆ ಇರುವವರೆಗೂ, ನದಿಗಳು ಹರಿಯುತ್ತಿರುವವರೆಗೂ ಲೋಕದಲ್ಲಿ ವ್ಯಾಪಿಸಿರುತ್ತದೆಯೆಂಬ ಖ್ಯಾತಿಯಿದೆ. ಆದಿಕಾವ್ಯವೆಂದು ಪ್ರಸಿದ್ಧವಾಗಿರುವ ರಾಮಾಯಣವು ಭಾರತೀಯ ಸಂಸ್ಕೃತಿಗೆ ಮೂಲ. ಹಲವು ಭಾಷೆಗಳು, ಮತಧರ್ಮಗಳು, ಪಂಗಡಗಳು, ನೂರಾರು ಒಳಪಂಗಡಗಳು ಎಲ್ಲವೂ ಸೇರಿ ನಮ್ಮ ಭಾರತೀಯ ಸಂಸ್ಕೃತಿಯ ಸಂಪತ್ತನ್ನು ವೈವಿಧ್ಯಮಯವಾಗಿಯೂ, ಶ್ರೀಮಂತವಾಗಿಯೂ ಮಾಡಿದೆ. ಈ ಎಲ್ಲವನ್ನು ಒಂದು ಏಕಸೂತ್ರವಾಗಿ ರಾಮಾಯಣವು ಸಾಮರಸ್ಯದೊಂದಿಗೆ ಬೆಸೆದು ಇಡೀ ದೇಶದ ಸಂಸ್ಕೃತಿಯನ್ನು ವೈಶಿಷ್ಟ್ಯಪೂರ್ಣವಾಗಿಸಿ ಪ್ರಪಂಚದಾದ್ಯಂತ ಮೆಚ್ಚಿಕೆ ಹಾಗೂ ಬೆರಗನ್ನು ಮೂಡಿಸಿದೆ.

ಮಹರ್ಷಿವಾಲ್ಮೀಕಿಯಿಂದ ಸೃಷ್ಟಿಯಾಯಿತೆನ್ನಲಾದ ಈ ಮಹಾಕಾವ್ಯವನ್ನು ನಮ್ಮ ಇತಿಹಾಸವೆಂದೂ ಹೇಳುತ್ತಾರೆ. ತ್ರೇತಾಯುಗಕ್ಕೆ ಸಂಬಂಧಿಸಿದ್ದೆನ್ನಲಾದ ಈ ಮಹಾಕಾವ್ಯದ ಅನನ್ಯತೆ ಇರುವುದೇ ಇದು ನೀಡುತ್ತ ಬಂದಿರುವ ಸಾರ್ವಕಾಲಿಕ, ಸಾರ್ವತ್ರಿಕ ಜೀವನಮೌಲ್ಯಗಳಲ್ಲಿ. ಆದ್ದರಿಂದಲೇ ಮಹರ್ಷಿ ವಾಲ್ಮೀಕಿಯ ನಂತರ ಅದೆಷ್ಟೋ ಕವಿಗಳು, ಸಂತರು, ಕಲಾವಿದರು ತಮ್ಮ ತಮ್ಮ ಆಸಕ್ತಿಯ ಮಾಧ್ಯಮಗಳ ಮೂಲಕ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಾಮಕಥೆಯನ್ನು ಬಿಚ್ಚಿಟ್ಟಿದ್ದಾರೆ. ಪಂಡಿತರಿಂದ ಪಾಮರರವರೆಗೆ ದೇಶದ ಉದ್ದಗಲಕ್ಕೂ ಹಬ್ಬಿರುವ ಎಲ್ಲ ಪಟ್ಟಣಗಳ, ಗ್ರಾಮಗಳ ಜನರ ಮನಸ್ಸಿನಲ್ಲಿ ಶ್ರೀರಾಮಚಂದ್ರನ ವ್ಯಕ್ತಿತ್ವ ತನ್ನ ಸ್ಥಾನವನ್ನು ಶಾಶ್ವತವಾಗಿ ಪಡೆದುಕೊಂಡಿದೆ. 'ಜೈ ರಾಮ್‌ಜೀ' ಎಂಬ ಉದ್ಗಾರ ಉತ್ತರದೇಶದ ಗ್ರಾಮ, ನಗರಗಳಲ್ಲಿ ಪರಿಚಿತರನ್ನು ಕಂಡಾಗ, ಬೀಳ್ಕೊಂಡಾಗ ಎಷ್ಟು ಸಹಜವೋ ಅಷ್ಟೇ ಸಹಜವಾಗಿರುತ್ತದೆ. ದಕ್ಷಿಣದ ಭಾಗಗಳ ಜನರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ 'ರಾಮಾ' ಎಂಬ ಶಬ್ದ. ದಕ್ಷಿಣದ ತ್ಯಾಗರಾಜರು ರಾಮಭಕ್ತರಾಗಿದ್ದಂತೆಯೇ ಉತ್ತರದ ತುಲಸೀದಾಸರ ಆರಾಧ್ಯದೇವನು ಶ್ರೀರಾಮನೇ. ಭದ್ರಾಚಲ ರಾಮದಾಸರೂ ಶ್ರೀರಾಮನ ಭಕ್ತರೇ, ಸಂತ ಕಬೀರರೂ ರಾಮಭಕ್ತರೇ. ಮಹಾರಾಷ್ಟ್ರದ ಬ್ರಹ್ಮಚೈತನ್ಯರ ಭಕ್ತಿಯಿಂದ ಮಿಂದವನೂ ಶ್ರೀರಾಮನೇ. ಅವತಾರಪುರುಷನಾದ ಶ್ರೀರಾಮ ಎಲ್ಲರ ಮೆಚ್ಚಿನ ದೇವ. ಸೀತಾಮಾತೆ ಎಲ್ಲರಿಗೂ ಪೂಜನೀಯಳೇ. ಆಂಜನೇಯನ ಭಕ್ತರಿಲ್ಲದ ಊರೇ ಇಲ್ಲ. ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಇವರೆಲ್ಲ ತಮ್ಮವರು, ತಮ್ಮೂರಿನವರು ಎಂಬ ಆತ್ಮೀಯತೆಯು, ಭಕ್ತಿಭಾವದ ಅನುಬಂಧವೇ ತುಂಬಿ ಕೊಂಡಿರುತ್ತದೆ.



ರಾಮಾಯಣದ ಪಾತ್ರಗಳು ಎಲ್ಲರ ಬದುಕಿನೊಂದಿಗೆ ಹಾಸುಹೊಕ್ಕಾಗಿ ಸೇರಿಕೊಂಡಿರುವಂತಹವು. ಅವು ದೇಶದ ಮೂಲೆಮೂಲೆಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ, ತಮ್ಮ ಛಾಪನ್ನು ಒತ್ತಿವೆ. ಅದರಿಂದಲೇ ಪ್ರತಿ ಊರಿನಲ್ಲಿ ಜನರು ರಾಮಾಯಣದ ಯಾವುದರೂ ಒಂದು ಘಟನೆಯೊಂದಿಗೆ ತಮ್ಮೂರಿನ ಸಂಬಂಧವನ್ನು ಕಲ್ಪಿಸಿಕೊಂಡು ಹೆಮ್ಮೆ ಪಡುತ್ತಾರೆ. ಧನ್ಯತೆಯ ಭಾವವನ್ನು ಅನುಭವಿಸುತ್ತಾರೆ.

ರಾಮಾಯಣದ ಬಹುತೇಕ ಪಾತ್ರಗಳು ಒಂದೊಂದು ಅದ್ಭುತವಾದ ಜೀವನಮೌಲ್ಯಗಳನ್ನು ಸಾರುತ್ತವೆ. 'ಮರ್ಯಾದಾ ಪುರುಷೋತ್ತಮ' ನೆಂದೇ ಹೆಸರಾದ ಶ್ರೀರಾಮಚಂದ್ರ ಆದರ್ಶಪುತ್ರ, ಪಿತೃವಾಕ್ಯಪರಿಪಾಲಕ, ಏಕಪತ್ನೀ ವ್ರತಸ್ಥ, ಧರ್ಮಸಂಸ್ಥಾಪನಾರ್ಥವಾಗಿ ದುಷ್ಟ ಶಿಕ್ಷಣ ಕಾರ್ಯಗಳಲ್ಲಿ ತೊಡಗಿ, ಅವತಾರಪುರುಷನಾಗಿದ್ದರೂ ಮನುಷ್ಯ ಮಾತ್ರನಾದವನು ಅನುಭವಿಸುವಂತೆ ಎಲ್ಲ ಕಷ್ಟ ಕೋಟಲೆಗಳನ್ನು, ನೋವು, ಸಂಕಟವನ್ನು ಅನುಭವಿಸುತ್ತಲೇ 'ರಾಮರಾಜ್ಯ'ವೆಂಬ ಆದರ್ಶರಾಜ್ಯದ ಪರಿಕಲ್ಪನೆಯನ್ನು ಸಾಕಾರಗೊಳಿಸಿ ಜನಮಾನಸ ದಲ್ಲಿ ಶಾಶ್ವತವಾಗುಳಿಸಿದ ಆದರ್ಶಪುರುಷ. ದಶರಥನ ಪುತ್ರಪ್ರೇಮ, ಲಕ್ಷ್ಮಣನ ಸೇವಾಭಾವ, ಭರತ–ಶತ್ರುಘ್ನರ ಭ್ರಾತೃಪ್ರೇಮ, ಸುಗ್ರೀವಾದಿಗಳ ಸ್ನೇಹ, ಆಂಜನೇಯನ ಸ್ವಾಮಿಭಕ್ತಿ, ವಿಭೀಷಣನ ನ್ಯಾಯನಿಷ್ಠೆ, ಮಂಡೋದರಿಯ ಕರ್ತವ್ಯಪ್ರಜ್ಞೆ, ಸೀತಾದೇವಿಯ ಪತ್ನೀಧರ್ಮ, ಊರ್ಮಿಳೆಯ ಮೌನತಪಸ್ಸು ಒಂದೇ? ಎರಡೇ? ಆದರ್ಶದ ಹಲವಾರು ಮುಖಗಳು ಇಡೀ

ಪುಟ 4 ಕ್ಕೆ ➤

➢ ಪುಟ 3 ರಿಂದ..... ರಾಮಾಯಣ...

ರಾಮಾಯಣದಲ್ಲಿ ತೆರೆದುಕೊಂಡಿವೆ. ರಾಮನಾಮಸ್ಮರಣೆಯೆಂಬುದು ಎಲ್ಲರಿಗೂ ಪವಿತ್ರಮಂತ್ರವೇ. ಸೀತಾರಾಮಲಕ್ಷ್ಮಣರು ಸಂಚರಿಸಿದ ಸ್ಥಳಗಳೆಲ್ಲ ದಿವ್ಯಕ್ಷೇತ್ರಗಳೇ. ಹಾಗಾಗಿ ಪ್ರತಿ ಹಳ್ಳಿಯವರೂ ಆ ದಿವ್ಯ ಕ್ಷೇತ್ರಗಳಲ್ಲಿ ತಮ್ಮ ಊರೂ ಸೇರಿದೆಯೆಂದು ಭಾವಿಸಲು ಬಯಸುತ್ತಾರೆ. ರಾಮಾಯಣ ಎಲ್ಲರ ಪಾಲಿಗೆ ನಿತ್ಯ ಪಾರಾಯಣ ಗ್ರಂಥವಾಗಿದೆ. ಮಾತಿಗೆ ತಪ್ಪದ ನಡವಳಿಕೆ ಎಲ್ಲರಿಗೆ ಆದರ್ಶಪ್ರಾಯವೆನಿಸಿಕೊಂಡಿದೆ. ಜನರಲ್ಲಿ ಧಾರ್ಮಿಕತೆಯನ್ನು ಬೆಳೆಸುವುದರೊಂದಿಗೆ ಉತ್ತಮವಾದ ಸಂಸ್ಕಾರವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಂತೆ ಪ್ರೇರಣೆ ನೀಡುತ್ತದೆ. ಇದು ದೇಶವಿಡೀ ಹಬ್ಬಿರುವ ಪ್ರಭಾವವನ್ನು ಬೆಳೆಸಿಕೊಳ್ಳುವಂತೆ ಪ್ರೇರಣೆ ನೀಡುತ್ತದೆ.

ರಾಮಾಯಣದ ಪವಿತ್ರಕಥೆಯನ್ನು ತಿಳಿಯುವುದು ಒಂದು ಶಿಕ್ಷಣದಂತೆಯೇ ಎನಿಸಿದೆ. ಅಂತೆಯೇ ಇತ್ತೀಚಿನ ಕೆಲವು ದಶಕಗಳ ಹಿಂದಿನವರೆಗೂ ಇಲ್ಲಿ ಪಠ್ಯಪುಸ್ತಕಗಳಲ್ಲಿ ರಾಮಾಯಣದ ಒಂದು ಘಟನೆ ಅಥವಾ ಪ್ರಸಂಗ ಕಡ್ಡಾಯವಾಗುತ್ತಿತ್ತು.

ಅದರಲ್ಲಿನ ಜೀವನವೌಲ್ಯವನ್ನು ಕಲಿಸುವ ಮೂಲಕ ಭಾರತೀಯ ಸಂಸ್ಕೃತಿಯ ಪರಿಚಯವನ್ನು ಪ್ರಾಥಮಿಕ ಹಂತದಿಂದಲೇ, ಬಾಲ್ಯದಿಂದಲೇ ಮಕ್ಕಳಿಗೆ ನೀಡುತ್ತ ಶಿಕ್ಷಣದ ಒಂದು ಭಾಗವನ್ನಾಗಿಯೇ ರಾಮಾಯಣವನ್ನು ತೆಗೆದುಕೊಳ್ಳಲಾಗುತ್ತಿತ್ತು. ಇದು ಒಂದು ರಾಜ್ಯಕ್ಕೆ ಸೀಮಿತವಾಗಿರುತ್ತಿರಲಿಲ್ಲ ಮತ್ತು ಇದರಲ್ಲಿ ರಾಜ್ಯ ರಾಜ್ಯಗಳ ನಡುವೆ ಭಿನ್ನಾಭಿಪ್ರಾಯವಿರುತ್ತಿರಲಿಲ್ಲ. ಎಲ್ಲರ ಆರಾಧ್ಯದೇವನಾದ ಆತ್ಮರಾಮನ ಕಥೆಯನ್ನು ಕೇಳುವುದು, ಹೇಳುವುದು ಎಲ್ಲರಿಗೂ ಪ್ರಿಯವೇ.

"ರಾಮಾಯಣ" ಧಾರಾವಾಹಿ ದೂರದರ್ಶನದಲ್ಲಿ ಬರುತ್ತಿರುವಾಗ ಇಡೀ ಭಾರತವೇ ಸ್ತಬ್ಧವಾಗಿ ಬಿಡುತ್ತದೆ. ಎಲ್ಲ ಕಡೆ ಜನ ತಮ್ಮೆಲ್ಲ ಕೆಲಸಕಾರ್ಯಗಳನ್ನು ಬದಿಗೊತ್ತಿ ತಮ್ಮ ಪ್ರೀತಿಯ, ಪವಿತ್ರವಾದ ರಾಮಕಥೆಯನ್ನು ನೋಡುವಲ್ಲಿ ತಲ್ಲೀನರಾಗಿ ಬಿಡುತ್ತಾರೆ. (when Ramayana starts, whole India stands still) ಇದು ಸುಮಾರು ಮೂರು ದಶಕಗಳ ಹಿಂದೆ ದೂರದರ್ಶನದಲ್ಲಿ ರಮಾನಂದ್‌ಸಾಗರ್ ರಾಮಾಯಣ ಧಾರಾವಾಹಿಯನ್ನು ಪ್ರಸ್ತುತಪಡಿಸುತ್ತಿದ್ದಾಗ ಎಲ್ಲ ಕಡೆ ಜನಜನಿತವಾಗಿದ್ದ ಮಾತು. ಏಕೆಂದರೆ, ರಾಮಾಯಣದ ಪಾತ್ರಗಳು ಎಲ್ಲರ ಬದುಕಿನೊಂದಿಗೆ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಅವು ದೇಶದ ಮೂಲೆಮೂಲೆಗಳಲ್ಲಿ ತಮ್ಮ ಛಾಪನ್ನು ಒತ್ತಿವೆ, ಪ್ರಭಾವವನ್ನು ಬೀರುತ್ತಲೇ ಇವೆ. ಅಲ್ಲಿನ ಆದರ್ಶ ಪಾತ್ರಗಳ ಪ್ರೀತಿ, ಕರುಣೆ, ತ್ಯಾಗ, ಧರ್ಮ, ಕರ್ತವ್ಯಶ್ರದ್ಧೆ ಎಲ್ಲವೂ ಜನರ ಮನಸ್ಸನ್ನು ಸಂಸ್ಕರಿಸುತ್ತಲೇ ಇವೆ. ಪಾಪಭೀರುಗಳಾಗುವಂತೆ ಮಾಡುತ್ತಲೇ ಇವೆ. ಭಾರತೀಯರ ಮನೋಧರ್ಮದಲ್ಲಿ ನಿರಂತರವಾಗಿ ಹರಿಯುತ್ತಲೇ ಬಂದಿರುವ ಸಂಸ್ಕೃತಿಯ ಮಹಾಪೂರವೇ ರಾಮಾಯಣವೆನಿಸಿದೆ.

ದುಷ್ಟಶಿಕ್ಷಣ, ಶಿಷ್ಟರಕ್ಷಣೆ ಎಂಬ ಧ್ಯೇಯದೊಂದಿಗೆ ಅವತಾರಗಳನ್ನೆತ್ತಿದನೆಂದು ಹೇಳುವ ನಾರಾಯಣನ ಏಳನೇ ಅವತಾರವಾದ ಶ್ರೀರಾಮಚಂದ್ರ ತ್ರೇತಾಯುಗದಲ್ಲಿ ಜನಿಸಿ ಸತ್ಯ, ಧರ್ಮಗಳ ಸುಭಿಕ್ಷ ಕಾಲವೆಂದು ನಿರೂಪಿಸುತ್ತಾ ಯುಗಯುಗಗಳು ಕಳೆದರೂ "ರಾಮರಾಜ್ಯ" ದ ಪವಿತ್ರ ಕಲ್ಪನೆಯನ್ನು ಶಾಶ್ವತವಾಗಿ ಉಳಿಸಿದವನು. "ಶ್ರೀರಾಮ ಜಯರಾಮ ಜಯ ಜಯ ರಾಮ" ಎಂಬ ಘೋಷಣೆಗೆ ದೇಶದ ಯಾವ ಮೂಲೆಗೆ ಹೋದರೂ ಪ್ರತಿಸ್ಪಂದನವಿದ್ದೇ ಇರುತ್ತದೆ. ಶಾಂತಮೂರ್ತಿ ಆದರೆ ದುಷ್ಟಸಂಹಾರಿ ರಾಮನು ಕಲ್ಯಾಣರಾಮನೂ ಹೌದು. ನ್ಯಾಯಪಾಲನೆಯಲ್ಲಿ ಸ್ಥಿರಚಿತ್ತನೂ, ಕಠಿಣಮನಸ್ಕನೂ ಹೌದು. ಅದಕ್ಕೇ ಅಂದಿನ ರಾಮಕಥೆ ಕಾವ್ಯಗಳಾಗಿ, ನಾಟಕ, ಸಂಗೀತ, ನೃತ್ಯಗಳಲ್ಲಿ ಕಲೆಯ ಇನ್ನಿತರ ಹತ್ತಾರು ಮಾಧ್ಯಮಗಳಲ್ಲಿ ನಿರೂಪಿತವಾಗುತ್ತ ಜನರಲ್ಲಿ ಸಂಸ್ಕಾರವನ್ನು ವೃದ್ಧಿಸುತ್ತಿವೆ. ಹಳ್ಳಿಹಳ್ಳಿಗಳಲ್ಲಿ ಬೀದಿಬೀದಿಗಳಲ್ಲಿಯೂ ರಾಮಮಂದಿರಗಳು ತಲೆಯೆತ್ತಿವೆ. ಪ್ರತಿವರ್ಷ ಶ್ರೀರಾಮನ ಜನ್ಮದಿನದಂದು ಎಲ್ಲ ಕಡೆ ಉತ್ಸವವನ್ನು ಆಚರಿಸಿ ಸಂಭ್ರಮಿಸುತ್ತಾರೆ. 'ಶ್ರೀರಾಮನವಮಿ' ಎಂದು ಕರೆಯುವ ಈ ಶುಭದಿನವನ್ನು ಕೆಲವರು ಯುಗಾದಿಯಿಂದ ರಾಮನವಮಿಯವರೆಗೆ ವಸಂತ ನವರಾತ್ರಿಯೆಂದು ಕರೆದು ಪ್ರತಿದಿನ ಸಂಗೀತ, ನೃತ್ಯ, ನಾಟಕಗಳೆಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಮತ್ತೆ ಕೆಲವರು ಶ್ರೀರಾಮನವಮಿಯಿಂದ ಒಂಬತ್ತು ದಿನಗಳ ಕಾಲ ಉತ್ಸವವನ್ನು ನಡೆಸುತ್ತಾರೆ. ಒಟ್ಟಾರೆಯಾಗಿ ಇಡೀ ದೇಶದ ಜನರು ರಾಮಕಥೆಯ ಪಾರಾಯಣದಲ್ಲಿ ಸಂತೋಷದಿಂದ ಪಾಲ್ಗೊಳ್ಳುತ್ತಾರೆ. ಯಾವುದೇ ಭೇದಭಾವವಿಲ್ಲದೆ ಎಲ್ಲರೂ ಒಂದಾಗಿ ರಾಮಜನ್ಮದಿನವನ್ನು, ರಾಮನಿಂದ ರಾವಣ ಸಂಹಾರವಾದ ಶುಭಸಂದರ್ಭವನ್ನು ಸ್ಮರಿಸುತ್ತ ಶ್ರೀರಾಮ ನವಮಿಯ ಹಬ್ಬದಲ್ಲಿ ಭಾಗವಹಿಸುತ್ತಾರೆ. ಎಲ್ಲ ಪಂಥದವರೂ ಎಲ್ಲ ಕಾಲಗಳಲ್ಲೂ ಭಕ್ತಿಯಿಂದ ಆರಾಧಿಸುವ ರಾಮಕಥೆಯ ಪಾರಾಯಣವು ಇಡೀ ದೇಶದ ಸಾಮಾಜಿಕ ಸಾಮರಸ್ಯವನ್ನು ಕಾಪಾಡುವಲ್ಲಿ, ಸೌಹಾರ್ದಭಾವವನ್ನು ಜನರಲ್ಲಿ ಮೂಡಿಸುವಲ್ಲಿ, ಸಾಂಸ್ಕೃತಿಯ ಶಿಕ್ಷಣದೊಂದಿಗೆ ಸುಭಿಕ್ಷ, ಆರೋಗ್ಯಕರ ಸಮಾಜದ ನಿರ್ಮಾಣ ಮಾಡುವಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿದೆ.

ಶ್ರೀ ರಾಮ ಜಯರಾಮ.......ಜಯ ಜಯ ರಾಮ ಎಂಬ ಅಂದಿನ ರಾಮನಾಮದ ಭಜನೆಯು ಹರೇರಾಮ ಹರೇಕೃಷ್ಣ ಕೃಷ್ಣಾ ಹರೇ ಹರೇ ಎನ್ನುವ ಜಗತ್ತಿನಾದ್ಯಂತ ಹಬ್ಬಿರುವ ಕೃಷ್ಣ ಹರಿನಾಮ ಸ್ಮರಣಾವಳಿಯಲ್ಲಿಯೂ ಪ್ರತಿಧ್ವನಿಸುತ್ತಿದೆ. ಶ್ರೀರಾಮನನ್ನು ಪೂಜಿಸುವ ಭಕ್ತರು ಭಾರತದಾದ್ಯಂತ ಮಾತ್ರವಲ್ಲದೆ ಹೊರದೇಶಗಳಾದ ಬರ್ಮ, ಇಂಡೋನೇಷಿಯಾ, ಕಾಂಬೋಡಿಯಾ, ಫಿಲಿಫೇನ್ಸ್, ಶ್ರೀಲಂಕಾ, ನೇಪಾಳ, ಥೈಲ್ಯಾಂಡ್, ಮಲೇಷಿಯಾ, ಜಪಾನ್ ಮಂಗೋಲಿಯ, ವಿಯಟ್ನಾಂ, ಚೈನಾದೇಶಗಳಲ್ಲಿಯೂ ಲಕ್ಷಾಂತರ ಮಂದಿ ಇರುವುದು ರಾಮಕಥೆಯ ವಿಶೇಷವನ್ನು ಸೂಚಿಸುತ್ತದೆ.

●

# ಶಬರಿಯ ಭಕ್ತಿ - ಭಗವಂತನಿಗೆ ಪ್ರೀತಿ

**ಡಾ. ವೆಂಕಟರಮಣ ದೇವರು ಭಟ್ಟ**
**ಸಂಸ್ಕೃತ ಅಧ್ಯಾಪಕರು**
**ಬಾಲಕಿಯರ ಸರ್ಕಾರಿ**
**ಪದವಿಪೂರ್ವ ಕಾಲೇಜು,**
**ಹಳೇವಾಣಿವಿಲಾಸ, ಬೆಂಗಳೂರು**



ಮನುಷ್ಯನಾಗಿ ಹುಟ್ಟಿದಮೇಲೆ ಈ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಪ್ರತಿಯೊಬ್ಬರೂ ಬಯಸುವುದು ಸಹಜ. ಅದಕ್ಕಾಗಿ ವಿಶಿಷ್ಟ ಸಾಧನಾಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಹಾಗೂ ಪರಿಶುದ್ಧವಾದ ಮನೋಭೂಮಿಕೆಯೂ ಕೂಡ ಅತ್ಯವಶ್ಯಕ. ಭಗವಂತನಲ್ಲಿಡುವ ಅನನ್ಯ ಭಕ್ತಿಯು ನಮ್ಮಲ್ಲಿರುವ ಎಲ್ಲ ಪಾಪವನ್ನು ಭಸ್ಮಮಾಡಿ ನಮ್ಮನ್ನು ದೇವತ್ವಕ್ಕೆ ಕೊಂಡೊಯ್ಯುತ್ತದೆ. ಭಗವದ್ಭಕ್ತಿಯು ಜೀವಿಯನ್ನು ಭವಬಂಧನದಿಂದ ಬಿಡುಗಡೆಮಾಡುತ್ತದೆ.

"ಮೋಕ್ಷಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸಿ" ಎಂಬ ಉಕ್ತಿಯಂತೆ ಮೋಕ್ಷಸಾಧನ ಸಾಮಗ್ರಿಗಳಲ್ಲಿ ಭಕ್ತಿಯೇ ಶ್ರೇಷ್ಠವಾದದ್ದು. ಭಕ್ತಿಯ ಇನ್ನೊಂದು ಮುಖವೇ ಪರಮಾತ್ಮನಲ್ಲಿ ಶರಣಾಗತಿ. ಭಕ್ತಿಯ ಆರಂಭದಲ್ಲಿ ದಾಸ್ಯಭಾವ ತೋರಿದರೂ ಭಕ್ತಿಯ ಪರಾಕಾಷ್ಠತೆಯಲ್ಲಿ ಜೀವ–ಈಶ ಎಂಬ ಭೇದ ಇರುವುದಿಲ್ಲ. ಭಕ್ತಿಯು ಪರಮ ಪ್ರೇಮರೂಪವಾಗಿರುವುದು. ಇಲ್ಲಿ ಭಕ್ತನು ತನ್ನನ್ನು ಸಂಪೂರ್ಣವಾಗಿ ಭಗವಂತನಿಗೆ ಸಮರ್ಪಿಸಿ ಕೊಂಡಿರುತ್ತಾನೆ. ಈ ಭಕ್ತಿಯಲ್ಲಿ ದೇಶದ ಗಡಿ, ಕಾಲದ ಗಡಿ, ಜಾತಿಯ ಗಡಿ, ಭಾಷೆಯ ಗಡಿ, ಲಿಂಗದ ಗಡಿ, ವಯಸ್ಸಿನ ಗಡಿ ಯಾವುದೂ ಇರುವುದಿಲ್ಲ. ಅವನು ಮಾಡುವ ಪ್ರತಿಯೊಂದು ಕ್ರಿಯೆಯೂ ಭಗವಂತನಿಗೆ ಸಮರ್ಪಿತ. ಇಂತಹ ಒಂದು ಉದಾತ್ತ ತತ್ತ್ವವನ್ನು ಶಬರಿಯ ವೃತ್ತಾಂತದ ಮೂಲಕ ಮಹರ್ಷಿ ವಾಲ್ಮೀಕಿಯವರು ಬಹಳ ಮನೋಜ್ಞವಾಗಿ ತಮ್ಮ ರಾಮಾಯಣ ಮಹಾಕಾವ್ಯದಲ್ಲಿ ನಿರೂಪಿಸಿದ್ದಾರೆ.



ಶಬರಿ ಒಬ್ಬ ಬೇಡತಿ. ರಾಮನ ಪರಮ ಭಕ್ತಳು. ಸೀತಾಪಹರಣದ ನಂತರ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಪಂಪಾತೀರದ ಬಳಿಗೆ ಬಂದಾಗ ತನ್ನ ಆಶ್ರಮಕ್ಕೆ ಬಂದ ಅವರಿಗೆ ಪಾದ್ಯವನ್ನು ಆಚಮನೀಯಾದಿಗಳನ್ನು ವಿಧಿವತ್ತಾಗಿ ಕೊಟ್ಟು ಸತ್ಕರಿಸುತ್ತಾಳೆ. ಶ್ರೀರಾಮನು ವ್ರತನಿಷ್ಠಳಾದ ಶಬರಿಯನ್ನು ಕುರಿತು – "ಹೇ ತಪೋಧನೆ, ತಪೋವಿಘ್ನಗಳಾದ ಮನೋವಿಕಾರವೆಲ್ಲವನ್ನು ಗೆದ್ದಿರುವೆಯಾ? ನಿನ್ನ ತಪಸ್ಸು ವರ್ಧಿಸುತ್ತಿರುವುದೇ?

**ಕಚ್ಚಿತ್ತೇ ನಿಯಮಾಃ ಪ್ರಾಪ್ತಾಃ ಕಚ್ಚಿತ್ತೇ ಮನಸಃ ಸುಖಮ್ ।**
**ಕಚ್ಚಿತ್ತೇ ಗುರುಶುಶ್ರೂಷಾ ಸಫಲಾ ಚಾರುಭಾಷಿಣಿ ॥**

ನೀನು ವ್ರತಗಳೆಲ್ಲವನ್ನು ನಡೆಸಿರುವೆಯಾ? ನಿನ್ನ ಮನಸ್ಸಿನಲ್ಲಿ ಶಾಂತಿ ನೆಲೆಸಿದೆಯೆ? ತಪಸ್ವಿನಿ, ನಿನ್ನ ಗುರುಶುಶ್ರೂಷೆಯು ಸಫಲವಾಯಿತೇ?" ಎಂದು ಕೇಳಿದಾಗ ಶಬರಿಯು ನೀಡಿದ ಉತ್ತರವಿದು:

**ಅದ್ಯ ಮೇ ಸಫಲಂ ಜನ್ಮ ಸ್ವರ್ಗಶ್ಚೈವ ಭವಿಷ್ಯತಿ ।**
**ತ್ವಯಿ ದೇವವರೇ ರಾಮ ಪೂಜಿತೇ ಪುರುಷರ್ಷಭ ॥**

ಹೇ ಪುರುಷೋತ್ತಮ, ಈಗ ನನ್ನ ತಪಸ್ಸು ಸಿದ್ಧಿಸಿತು. ನನ್ನ ಗುರುಶುಶ್ರೂಷೆಗೆ ಉತ್ತಮ ಫಲ ದೊರೆಯಿತು. ನಾನು ಹುಟ್ಟಿದುದು ಇಂದು ಸಾರ್ಥಕವಾಯಿತು. ಇನ್ನು ನನಗೆ ಸದ್ಗತಿಯಾಗುವುದು. ದೇವೋತ್ತಮನಾದ ನೀನು ನನ್ನಿಂದ ಪೂಜೆಯನ್ನು ಕೈಗೊಂಡರೆ ಸಕಲವೂ ನನಗೆ ಸಿದ್ಧಿಸಿದಂತೆಯೇ. ಮಹಾತ್ಮರಾದ ನನ್ನ ಗುರುಗಳಾದ ಮತಂಗ ಮಹರ್ಷಿಗಳು– "ಇನ್ನು ಸ್ವಲ್ಪ ಕಾಲದಲ್ಲಿ ಲಕ್ಷ್ಮಣ ಸಮೇತನಾಗಿ ಶ್ರೀರಾಮನು ಈ ಪುಣ್ಯಾಶ್ರಮಕ್ಕೆ ಬರುವನು. ಆತನನ್ನು ನೀನು ಅತಿಥಿಯೆಂದು ಸತ್ಕರಿಸಬೇಕು. ಶ್ರೀರಾಮನ ದರ್ಶನವಾದ ಮೇಲೆ ನಿನಗೆ ಶಾಶ್ವತವಾದ ಸದ್ಗತಿಯು ಲಭಿಸುವುದು" ಎಂದು ಹೇಳಿ ಸ್ವರ್ಗಕ್ಕೆ ಹೊರಟು ಹೋದರು. ಅಂದಿನಿಂದಲೂ ನಿನ್ನ ನಾಮಸ್ಮರಣೆ ಮಾಡುತ್ತ ನಿನ್ನ ಬರುವಿಕೆಗಾಗಿ ಇದಿರು ನೋಡುತ್ತಿದ್ದೇನೆ.

**ಮಯಾ ತು ವಿವಿಧಂ ವನ್ಯಂ ಸಂಚಿತಂ ಪುರುಷರ್ಷಭ।**
**ತವಾರ್ಥೇ ಪುರುಷವ್ಯಾಘ್ರ ಪಂಪಾಯಾಸ್ತೀರಸಂಭವಮ್॥**

ಹೇ ಪರುಷೋತ್ತಮ, ನಾನು ಪಂಪಾತೀರದಲ್ಲಿ ದೊರೆಯುವ ಫಲಮೂಲಾದಿ ವನ್ಯಾಹಾರವನ್ನು ನಿನಗೋಸ್ಕರ ಸಂಗ್ರಹಿಸಿದ್ದೇನೆ" ಸ್ವೀಕರಿಸು ಎಂದು ಭಕ್ತಿಯಿಂದ ಪ್ರಾರ್ಥಿಸಿದಳು.

ಸಂತ ತುಳಸಿದಾಸರು ಶ್ರೀರಾಮಚರಿತಮಾನಸದಲ್ಲಿ ಈ ಸಂದರ್ಭವನ್ನು ತುಂಬ ಸುಂದರವಾಗಿ ಚಿತ್ರಿಸಿದ್ದಾರೆ.

**ಕಂದ ಮೂಲ ಫಲ ಸುರಸ ಅತಿ ದಿಏ ರಾಮ ಕಹು ಆನಿ।**
**ಪ್ರೇಮ ಸಹಿತ ಪ್ರಭು ಖಾಏ ಬಾರಂಬಾರ ಬಖಾನಿ।**

**ಪುಟ 6 ಕ್ಕೆ ➢**

➢ ಪುಟ 5 ರಿಂದ..... ಶಬರಿ ಕಥೆ...

ಶಬರಿಯು ಭಕ್ತಿಯಿಂದ ಅತ್ಯಂತ ರುಚಿಕರವಾದ ಮಾಗಿದ ರಸಭರಿತವಾದ ಕಂದ ಮೂಲ ಫಲಗಳನ್ನು ತಂದು ಶ್ರೀರಾಮನಿಗೆ ಅರ್ಪಿಸಿದಳು. ಪ್ರಭುವು ಅದನ್ನು ಮೆಚ್ಚಿಕೊಂಡು ಮತ್ತೆ ಮತ್ತೆ ಹೊಗಳುತ್ತಾ ಪ್ರೇಮದಿಂದ ಭುಂಜಿಸಿದನು.

ಪ್ರಭುವನ್ನು ಕಂಡು ಶಬರಿಯ ಪ್ರೇಮ ಉಕ್ಕಿಹರಿಯಿತು. ಆಕೆಯು ಭಕ್ತಿಯಿಂದ ಕೈಜೋಡಿಸಿ – ಸ್ವಾಮಿ, ನಾನು ಕೀಳು ಜಾತಿಯ ಹೆಣ್ಣು, ಮಂದಬುದ್ಧಿಯವಳು. ಅಧಮರಲ್ಲಿಯೂ ಅತಿ ಅಧಮಳು ನಾನು" ಎಂದು ಪ್ರಾರ್ಥಿಸಿದಳು. ಆಕೆಯ ಮಾತನ್ನು ಕೇಳಿ ಶ್ರೀರಾಮನು "ನಾನು ಕೇವಲ ಭಕ್ತಿಯ ಸಂಬಂಧವನ್ನು ಮಾತ್ರ ನೋಡುವವನು.

**ಜಾತಿ ಪಾತಿ ಕುಲ ಧರ್ಮ ಬಡಾಈ ಧನ**
**ಬಲ ಪರಿಜನ ಗುನ ಚತುರಾಈ।**
**ಭಗತಿ ಹೀನ ನರ ಸೋಹೀ ಕೈಸಾ**
**ಬಿನು ಜಲ ಬಾರಿದ ದೇಖಿಅ ಜೈಸಾ॥**

ಜಾತಿ ಪಂಥ ಕುಲ ಧರ್ಮ ದೊಡ್ಡಸ್ತಿಕೆ ಧನ ಬಲ ಕುಟುಂಬ ಗುಣ ಮಾತು ಜಾಣ್ಮೆ ಇವೆಲ್ಲ ಇದ್ದರೂ ಭಕ್ತಿಯಿಲ್ಲದ ನರನು ನೀರಿಲ್ಲದ ಮೋಡದಂತೆ ನಿಷ್ಫಲನು. ಆದ್ದರಿಂದ ಅಂತಹವರು ನನಗೆ ಪ್ರೇಮ ಪಾತ್ರರಲ್ಲ" ಎಂದು ಸಮಾಧಾನಪಡಿಸುತ್ತಾನೆ.

ಶ್ರೀರಾಮನ ಪ್ರೀತಿಯ ಮಾತುಗಳಿಂದ ಸಂತುಷ್ಟಳಾದ ಶಬರಿಯು–ಹೇ ಶ್ರಿರಾಮ, ಮತಂಗ ಮುನಿಗಳು ಅಪ್ಪಣೆಕೊಟ್ಟಂತೆ ನಿನ್ನ ನಾಮಸ್ಮರಣೆ ಹಾಗೂ ಸೇವೆಮಾಡಿದ್ದೇನೆ. ಈಗ ಈ ಕಳೇಬರಹವನ್ನು ತ್ಯಜಿಸಲು ನನಗೆ ಅನುಜ್ಞೆ ಕೊಡು ಎಂದು ಕೋರಿದಳು.

**ತಾಮುವಾಚ ತತೋ ರಾಮ: ಶಬರೀಂ ಸಂಶ್ರಿತವ್ರತಾಮ್।**
**ಅರ್ಚಿತೋಽಹಂ ತ್ವಯಾ ಭಕ್ತ್ಯಾ ಗಚ್ಛ ಕಾಮಂ ಯಥಾಸುಖಮ್॥**

ವ್ರತನಿಷ್ಠಳಾದ ಶಬರಿಯನ್ನು ನೋಡಿ ಶ್ರೀರಾಮನು "ಧರ್ಮಚಾರಿಣಿ, ನನ್ನನ್ನು ಭಕ್ತಿಯಿಂದ ಅರ್ಚಿಸಿದ್ದೀಯೆ. ಇಚ್ಛೆ ಬಂದಲ್ಲಿಗೆ ಸುಖವಾಗಿ ತೆರಳು" ಎಂದನು. ಆಗ ಶಬರಿಯು ದಿವ್ಯಶರೀರವನ್ನು ಧರಿಸಿದವಳಾಗಿ–

**ವಿರಾಜಯಂತಿ ತಂ ದೇಹಂ ವಿದ್ಯುತ್ಸೌದಾಮನೀ ಯಥಾ।**
**ಯತ್ರ ತೇ ಸುಕೃತಾತ್ಮಾನೋ ವಿಹರಂತಿ ಮಹರ್ಷಯ: ॥**

ಮಿಂಚುವ ಮಿಂಚಿನಂತೆ ಆ ಪ್ರದೇಶವನ್ನು ಬೆಳಗಿಸುತ್ತ ತನ್ನ ತಪೋಬಲದಿಂದ ಪುಣ್ಯಾತ್ಮರಾದ ಮಹರ್ಷಿಗಳು ವಿಹರಿಸುತ್ತಿದ್ದ ಸ್ವರ್ಗವನ್ನೇರಿದಳು.

ಶಬರಿಯ ಭಕ್ತಿಯನ್ನು ಕುರಿತಾಗಿ ಅನೇಕ ಕವಿಗಳು, ಹರಿಕಥಾದಾಸರು ಹಾಗೂ ಜಾನಪದರು ಚಮತ್ಕಾರದಿಂದ ರೋಚಕವಾಗಿ ಬಗೆಬಗೆಯಾಗಿ ಕೊಂಡಾಡಿದ್ದಾರೆ. ಅದೇ ರೀತಿ ಕನಕದಾಸರ ಚರಿತೆಯಿರಬಹುದು, ಧರ್ಮವ್ಯಾಧನ ಕಥೆಯಿರಬಹುದು, ಬೇಡರ ಕಣ್ಣಪ್ಪನ ಕಥೆಯಿರಬಹುದು. ಎಲ್ಲದರ ಸಾರ ಒಂದೇ. ನಿಷ್ಕಲ್ಮಷ ಭಕ್ತಿಗೆ ಪರಮಾತ್ಮನು ಜಾತಿ ಭೇದವಿಲ್ಲದೇ ಒಲಿಯುತ್ತಾನೆ ಎಂಬುದೇ ಇವೆಲ್ಲದರ ಮುಖ್ಯತಾತ್ಪರ್ಯ. ನಮ್ಮ ಸನಾತನ ಹಿಂದೂಧರ್ಮದ ಎಲ್ಲ ದರ್ಶನಗಳ ಅಭಿಪ್ರಾಯವೂ ಇದೇ ಆಗಿದೆ.

●

# ಸಂಕಲ್ಪ ದಿನಾಚರಣೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) ಬೆಂಗಳೂರು ಉತ್ತರ ಜಿಲ್ಲಾ ಘಟಕವು ದಿನಾಂಕ 14.01.2018ರ ಭಾನುವಾರದಂದು ವಿ.ಐ.ಪಿ ಶಾಲೆ, ಟಿ. ದಾಸರಹಳ್ಳಿ ಇಲ್ಲಿ ಸ್ವಾಮಿ ವಿವೇಕಾನಂದ ಮತ್ತು ನೇತಾಜಿ ಸುಭಾಷಚಂದ್ರ ಬೋಸರ ಜಯಂತಿ ನಿಮಿತ್ತ ಸಂಕಲ್ಪ ದಿನಾಚರಣೆಯನ್ನು ಹಮ್ಮಿಕೊಂಡಿತ್ತು. ಕಾರ್ಯಕ್ರಮ ಬೆಳಗ್ಗೆ 11 ಗಂಟೆಗೆ ವಿ.ಐ.ಪಿ ಶಾಲೆಯ ವಿದ್ಯಾರ್ಥಿನಿಯ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು.

ಜಿಲ್ಲಾ ಅಧ್ಯಕ್ಷರಾದ ಶ್ರೀ ಎಸ್.ಜಿ ತಾಂಬೆಯವರು ವೇದಿಕೆ ಮೇಲಿನ ಗಣ್ಯರನ್ನು ಸ್ವಾಗತಿಸಿ ಪರಿಚಯಿಸಿದರು. ನಂತರ ಗಣ್ಯರೆಲ್ಲರೂ ಜ್ಯೋತಿ ಬೆಳಗಿಸಿ ಪುಷ್ಪ ನಮನ ಸಲ್ಲಿಸಿದರು. ಗೌರವ ಅಧ್ಯಕ್ಷರಾದ ಶ್ರೀ ಜೆ.ಎಂ. ಜೋಶಿಯವರು ಪ್ರಾಸ್ತಾವಿಕ ನುಡಿಯಲ್ಲಿ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು. ವಿ.ಐ.ಪಿ ಶಾಲೆಯ ವಿದ್ಯಾರ್ಥಿ/ ವಿದ್ಯಾರ್ಥಿನಿಯರು ದೇಶಭಕ್ತಿ ಗೀತೆಗಳನ್ನು ಹಾಡಿದರು.

ಹಿರಿಯರು ಹಾಗೂ ಸಂಘದ ಮಹಾಪೋಷಕರೂ ಆದ ಪ್ರೊ. ಕೃ. ನರಹರಿಯವರು ಶಿಕ್ಷಕ ವೃತ್ತಿಯ ಪಾವಿತ್ರ್ಯತೆಯ ಕುರಿತು ಮಾತನಾಡಿ ಎಲ್ಲ ಶಿಕ್ಷಕರಿಗೆ 'ಸಂಕಲ್ಪ' ವನ್ನು ಬೋಧಿಸಿದರು. ಮುಖ್ಯ ಅತಿಥಿಗಳಾದ ಶ್ರೀ ಪ್ರಮೋದ್ ಜಿ. ಇವರು ಸ್ವಾಮಿ ವಿವೇಕಾನಂದ ಮತ್ತು ಸುಭಾಷ್‌ಚಂದ್ರಬೋಸರ ಹೋರಾಟ ಮತ್ತು ಅವರ ಸಂದೇಶಗಳ ಕುರಿತು ವಿವರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ವಿ.ಐ.ಪಿ ಶಾಲೆಯ ಅಧ್ಯಕ್ಷರೂ ಆದ ಶ್ರೀ ವೆಂಕಟೇಶ್ವರ ಅವರು ಮಾತನಾಡಿ ಇಂಥಹ ಭವ್ಯವಾದ ಕಾರ್ಯಕ್ರಮವು ನಮ್ಮ ಶಾಲೆಯಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಅಲ್ಲದೇ ಈ ತರಹ ಕಾರ್ಯಕ್ರಮಗಳಿಂದ ಶಿಕ್ಷಕರಲ್ಲಿ, ವಿದ್ಯಾರ್ಥಿಗಳಲ್ಲಿ ರಾಷ್ಟ್ರ ಪ್ರೇಮವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

ಶ್ರೀ ಅನಿಲ ಜೋಶಿಯವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮವು ಶ್ರೀ ನಾರಾಯಣಭಟ್ಟರ ಶಾಂತಿಮಂತ್ರದೊಂದಿಗೆ ಮುಕ್ತಾಯವಾಯಿತು. ಶ್ರೀ ಸಿದ್ದೇಗೌಡರು ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಸುಮಾರು 50 ಜನ ಶಿಕ್ಷಕ/ ಶಿಕ್ಷಕಿಯರು ಭಾಗವಹಿಸಿದ್ದರು.

**ವರದಿ : ಎಸ್.ಜಿ ತಾಂಬೆ,**
ಬೆಂಗಳೂರು ಉತ್ತರ ಜಿಲ್ಲೆ ಅಧ್ಯಕ್ಷರು


# ರವೀಂದ್ರನಾಥ ಟಾಗೋರ್

**ವಿ. ರಾಜು**
**ಕನ್ನಡ ಭಾಷಾ ಸಂಪನ್ಮೂಲ ವ್ಯಕ್ತಿ**
**ಶಿಕ್ಷಣ ಪ್ರಕೋಷ್ಠ ಪ್ರಮುಖ್**
**ಕ.ರಾ.ಮಾ.ಶಿ.ಸಂ.**



**ಶಿ**ಕ್ಷಣ, ಸಾಹಿತ್ಯ, ಸಂಸ್ಕೃತ, ಸಂಗೀತ, ಭಾಷೆ, ನಾಟಕ, ಚಿತ್ರಕಲೆ, ಪ್ರವಾಸ ಮುಂತಾದ ಹವ್ಯಾಸಗಳನ್ನು ಮೈಗೂಡಿಸಿ ಕೊಂಡು ಓರ್ವ ಶ್ರೇಷ್ಠ ಯೋಗಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಕವಿಗಳಾಗಿ, ನಾಟಕಕಾರರಾಗಿ, ಶಿಕ್ಷಣ ತಜ್ಞರಾಗಿ, ಸಂಗೀತಗಾರರಾಗಿ, ದಾರ್ಶನಿಕರಾಗಿ ರವೀಂದ್ರನಾಥ ಟಾಗೋರ್ ಅವರು ಇಂದಿಗೂ ಪ್ರಸ್ತುತ. ಟಾಗೋರ್‌ರ ಬಂಗಾಳಿ–ಭಾಷಾ ಬರಹಗಳನ್ನು ಬಂಗಾಳದ ಅಮೂಲ್ಯ ಸಾಂಸ್ಕೃತಿಕ ಸಂಪತ್ತುಗಳಲ್ಲಿ ಒಂದೆಂದು ಪರಿಗಣಿಸ ಲಾಗಿದೆ. 'ಭಾರತ ಸೃಷ್ಟಿಸಿದ ಮಹಾ ಕವಿ' ಎಂದು ಟಾಗೋರ್ ಅವರನ್ನು ಬಣ್ಣಿಸಿಕೊಂಡಾಡಿದ್ದಾರೆ. ರವೀಂದ್ರನಾಥ ಟಾಗೋರ್ ಅವರು ಶಿಕ್ಷಣ ಕ್ಷೇತ್ರಕ್ಕೆ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ.

ರವೀಂದ್ರನಾಥ ಟಾಗೋರ್ ಅವರು ಶಿಲೈದಾಹವನ್ನು ಬಿಟ್ಟು ಶಾಂತಿನಿಕೇತನಕ್ಕೆ ಬಂದರು. ಅಲ್ಲೊಂದು ಆಶ್ರಮ ಸ್ಥಾಪಿಸಿದರು. ಅಮೃತ ಶಿಲೆಯ ನೆಲದ ಪ್ರಾರ್ಥನಾ ಮಂದಿರ ಅಲ್ಲಿ ತಲೆ ಎತ್ತಿತು. ಗಿಡ ಮರಗಳ ತೋಪು, ಉದ್ಯಾನ, ಗ್ರಂಥಾಲಯ ಜೊತೆಗೊಂದು ಪ್ರಾಯೋಗಿಕ ಶಾಲೆ–ಇವೆಲ್ಲ ಸಿದ್ಧವಾದವು. ಅವರ ಬರಹಗಳು ಅವರಿಗೆ ಹೆಚ್ಚಿನ ಬಂಗಾಳಿ ಅಭಿಮಾನಿಗಳನ್ನು ಮತ್ತು ವಿದೇಶಿ ಓದುಗರನ್ನು ತಂದು ಕೊಟ್ಟಿತು. ನೈವೇದ್ಯ (1901) ಮತ್ತು ಖೇಯ (1906) ಪುಸ್ತಕ ಗಳನ್ನು ಪ್ರಕಟಿಸಿದರು. ಇದೇ ಸಮಯದಲ್ಲಿ ಅವರು ತಮ್ಮ ಗೀತೆಗಳನ್ನು ಮುಕ್ತ ಛಂದಸ್ಸಿನ ಪದ್ಯ ಗಳನ್ನಾಗಿ ಅನುವಾದಿಸುವ ಕಾಯಕದಲ್ಲಿ ತೊಡಗಿದರು. 1913ರ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ತಮ್ಮ ಪಾಲಿಗೆ ಸಂದಿದ್ದು ಟಾಗೋರ್‌ಗೆ 1913ರ ನವೆಂಬರ್ 14ರಂದು ಗೊತ್ತಾಯಿತು. ಗೀತಾಂಜಲಿ : ಪದ್ಯಾರ್ಪಣೆಗಳು ಹಾಗೂ ಇನ್ನಿತರ ಅವರ ಅನುವಾದಿತ ಸಾಹಿತ್ಯ ಪಾಶ್ಚಾತ್ಯ ಓದುಗರಿಗೆ ಸಣ್ಣ ಪ್ರಮಾಣದಲ್ಲಿ ದೊರೆಯು ವಂತಾದದ್ದನ್ನು ಹಾಗೂ ಅದರ ಆದರ್ಶವಾದವನ್ನು ಸ್ವೀಡಿಶ್ ಅಕಾಡೆಮಿ ಮೆಚ್ಚಿಕೊಂಡಿತು. 1915ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ ಟಾಗೋರ್‌ಗೆ ನೈಟ್ ಬಿರುದನ್ನು ನೀಡಿ ಗೌರವಿಸಿತು.



ಟಾಗೋರ್ ಅವರು ಶಾಂತಿನಿಕೇತನದ ಆಶ್ರಮದ ಹತ್ತಿರದ ಹಳ್ಳಿ ಸುರುಲ್‌ನಲ್ಲಿ 1921ರಲ್ಲಿ ಗ್ರಾಮೀಣ ಪುನರುತ್ಥಾನಕ್ಕಾಗಿ ಸಂಸ್ಥೆಯೊಂದನ್ನು (ಟಾಗೋರ್ ಇದಕ್ಕೆ 'ಶ್ರೀನಿಕೇತನ–ಸಂಪತ್ತಿನ ನೆಲೆ' ಎಂದು ಮರು ಹೆಸರಿಸಿದರು) ಪ್ರಾರಂಭಿಸಿದರು. ಗಾಂಧಿ ನೇತೃತ್ವದ ಪ್ರತೀಕಕ್ಕೆ, ಸ್ವರಾಜ್ ಚಳವಳಿಗೆ ಬೆಂಬಲ ನೀಡಿ ಪರ್ಯಾಯವೊಂದನ್ನು ಟಾಗೋರ್ ಒದಗಿಸಲು ಯತ್ನಿಸಿದರು. ಅಸಹಾಯಕತೆ ಮತ್ತು ಅಜ್ಞಾನದ ತೊಳಲಾಟದಿಂದ ನರಳುತ್ತಿರುವ ಹಳ್ಳಿಗಳನ್ನು 'ಜ್ಞಾನಾಭಿವೃದ್ಧಿ'ಯಿಂದ ಮುಕ್ತವಾಗಿಸುವ, ಮತ್ತು ಇದಕ್ಕಾಗಿ ಸಂಸ್ಥೆಗೆ ನೆರವಾಗುವ ಉದ್ದೇಶದಿಂದ ವಿದ್ವಾಂಸರು, ದಾನಿಗಳು ಮತ್ತು ಅಧಿಕಾರಿಗಳನ್ನು ಬೇರೆ ಬೇರೆ ರಾಷ್ಟ್ರಗಳಿಂದ ನಿಯೋಜಿಸಿದರು. ಭಾರತದ 'ಜಾತಿ ಪದ್ಧತಿಯ ಕಾಠಿಣ್ಯ' ಮತ್ತು ಅಸ್ಪೃಶ್ಯತೆಯ ಆಚರಣೆಯನ್ನು 1930ರ ಆರಂಭದಲ್ಲಿ ಅವರು ಖಂಡಿಸಿದರು. ಈ ಎಲ್ಲ ಅನಿಷ್ಟಗಳ ವಿರುದ್ಧ ದನಿ ಎತ್ತಿದರು, ನಾಟಕ ಮತ್ತು ಕವನಗಳನ್ನು ರಚಿಸಿದರು, ಯಶಸ್ವಿ ಆಂದೋಲನದ ಮೂಲಕ ಗುರುವಾಯೂರ್ ದೇವಾಲಯವನ್ನು ದಲಿತರ ಪ್ರವೇಶಕ್ಕಾಗಿ ಮುಕ್ತಗೊಳಿಸಿದರು.

ಟಾಗೋರ್ ಅವರು ಯುರೋಪ್, ಉತ್ತರ ಅಮೇರಿಕ, ಮತ್ತು ಪೂರ್ವ ಏಷ್ಯಾದ್ಯಂತ ಪ್ರಖ್ಯಾತರು. ಅವರು ಪ್ರಗತಿಶೀಲ ಸಹಶಿಕ್ಷಣ ಸಂಸ್ಥೆ ಡಾರ್ಟಿಂಗ್ಟನ್ ಹಾಲ್ ಸ್ಕೂಲ್ ಸ್ಥಾಪನೆಯ ಪ್ರಮುಖ ರೂವಾರಿ; ಜಪಾನಿನಲ್ಲಿ ನೋಬೆಲ್ ಪ್ರಶಸ್ತಿ ಪುರಸ್ಕೃತ ಯಶುನಾರಿ ಕವಬತರಂತಹ ಅನೇಕ ವ್ಯಕ್ತಿಗಳ ಮೇಲೆ ತಮ್ಮ ಪ್ರಭಾವ ಬೀರಿದರು. ಬಹುವಾಗಿ ಇಂಗ್ಲೀಷ್, ಡಚ್, ಜರ್ಮನ್, ಸ್ಪ್ಯಾನಿಶ್, ಮತ್ತು ಇತರ ಯುರೋಪಿಯನ್ ಭಾಷೆಗಳಿಗೆ ಅನುವಾದ ಗೊಂಡಿವೆ. ಜೆಕ್ ದೇಶದ ಇತಿಹಾಸಜ್ಞ ವಿನ್ಸೆಂಕ್ ಲೆಸ್ನಿ ಫ್ರೆಂಚ್ ನೊಬೆಲ್ ಪ್ರಶಸ್ತಿ ವಿಜೇತ ಆಂಡ್ರೆ ಗೈಡ್, ರಷ್ಯಾದ ಕವಿ ಅನ್ನ ಅಖ್ಮತೋವ ಮಾಜಿ ಟರ್ಕಿಶ್ ಪ್ರಧಾನ ಮಂತ್ರಿ ಬುಲೆಂಟ್ ಎಸೆವಿಟ್, ಮತ್ತು ಇತರರಿಂದ ಟಾಗೋರ್‌ರ ಬರಹಗಳು ಅನುವಾದಿಸಲ್ಪಟ್ಟಿವೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಟಾಗೋರ್ ನೀಡಿದ ಉಪನ್ಯಾಸವು ಬಹು ಜನಪ್ರಿಯ (ವಿಶೇಷವಾಗಿ 1916–1917ರ ಅವಧಿಯದ್ದು). ಅಧಿಕ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದ ಶ್ರೋತೃಗಳಿಂದ ಮುಕ್ತ ಪ್ರಶಂಸೆಗೆ ಒಳಗಾದ ಉಪನ್ಯಾಸಗಳಿವು.

**ಅನುವಾದಗಳ ಮೂಲಕ ಟಾಗೋರ್ ಸ್ಪ್ಯಾನಿಶ್ ಸಾಹಿತ್ಯದ ಮೇಲೆ ಪ್ರಭಾವ ಬೀರಿದರು:** ಚಿಲಿ ದೇಶದವರಾದ ಪಬ್ಲೊ ನೆರುಡ ಮತ್ತು ಗಾಬ್ರಿಯೆಲ ಮಿಸ್ತ್ರಲ್, ಮೆಕ್ಸಿಕನ್ ಬರಹಗಾರ ಒಕ್ಟಾವಿಯೊ ಪಾಜ್, ಮತ್ತು ಸ್ಪೇನ್ ದೇಶದವರಾದ ಜೋಸ್ ಒರ್ಟೆಗ ವೈ ಗ್ಯಾಸೆಟ್, ಜೆನೊಬಿಯ ಕ್ಯಾಂಪ್ರುಬಿ, ಮತ್ತು ಜ್ವಾನ್ ರಾಮನ್ ಜಿಮೆನೆಜ್. 1914 ಮತ್ತು 1922ರ ಮಧ್ಯೆ, ಜಿಮೆನೆಜ್–ಕ್ಯಾಂಪ್ರುಬಿ ದಂಪತಿಗಳು ಟಾಗೋರ್‌ರ ಇಪ್ಪತ್ತೆರಡು ಪುಸ್ತಕಗಳನ್ನು ಇಂಗ್ಲಿಷ್‌ನಿಂದ ಸ್ಪ್ಯಾನಿಶ್‌ಗೆ ಅನುವಾದಿಸಿದರು ಮತ್ತು ವ್ಯಾಪಕ ಪರಿಷ್ಕರಣೆಗೆ ಒಳಪಡಿಸಿ ಅದಕ್ಕೆ ಟಾಗೋರ್‌ರ ದ ಕ್ರೆಸೆಂಟ್ ಮೂನ್ ಎಂದು ಹೆಸರಿಸಿದರು. 1920ರಲ್ಲಿ ದಾಂತೆ ಅಲಿಘ್ಯೆರಿ, ಮಿಗ್ವೆಲ್ ದೆ ಸರ್ವಾಂಟೆಸ್, ಜೋಹನ್ ವೋಲ್ಫ್‌ಗ್ಯಾಂಗ್ ವನ್ ಗೊಯಥೆ, ಪ್ಲೇಟೊ, ಮತ್ತು ಲಿಯೊ ಟಾಲ್‌ಸ್ಟಾಯ್ ಮೊದಲಾದವರ ಸಮಕಾಲೀನರಲ್ಲಿ ಟಾಗೋರ್‌ರವರ ಬರವಣಿಗೆಗಳು ಉಚಿತ ಆವೃತ್ತಿಗಳಾಗಿ ಪ್ರಸರಣಗೊಂಡಿದ್ದವು.

ಪುಟ 8 ಕ್ಕೆ ➤

ಭಕ್ತಿಯಿಲ್ಲದ ನರನು ನೀರಿಲ್ಲದ ಮೋಡದಂತೆ.

➢ ಪುಟ 7 ರಿಂದ..... ರವೀಂದ್ರನಾಥ್ ಟಾಗೋರ್...

**ರವೀಂದ್ರನಾಥ ಠಾಗೋರ್ ಅವರ ಅಂಕಿತ ನಾಮ ಗುರುದೇವ್**. ಅವರು ಬಂಗಾಳಿ ಮಹಾ ವಿದ್ವಾಂಸ. ಕವಿಗಳಾಗಿ, ಕಾದಂಬರಿಕಾರರಾಗಿ, ಸಂಗೀತಕಾರರಾಗಿ ಮತ್ತು ನಾಟಕ ರಚಿಸುವ ಮೂಲಕ ಅವರು 19ನೇ ಶತಮಾನದ ಕೊನೆಯಲ್ಲಿ ಮತ್ತು 20ನೇ ಶತಮಾನದ ಆರಂಭದಲ್ಲಿ ಬಂಗಾಳಿ ಸಾಹಿತ್ಯ ಮತ್ತು ಸಂಗೀತಕ್ಕೆ ಹೊಸ ರೂಪ ಕೊಟ್ಟರು. ಅವರು ರಚಿಸಿದ 'ಸೂಕ್ಷ್ಮ ಸಂವೇದನೆಯ, ನವನವೀನವೂ ಮತ್ತು ಸುಂದರವೂ ಆದ ಪದ್ಯ' ಗೀತಾಂಜಲಿ ಕಾವ್ಯಕ್ಕೆ 1913ರ ನೊಬೆಲ್ ಸಾಹಿತ್ಯ ಪ್ರಶಸ್ತಿ ದಕ್ಕಿತು. ಈ ಮೂಲಕ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಏಷ್ಯಾದ ಮೊದಲಿಗರು ಎಂಬ ಗೌರವಕ್ಕೆ ಪಾತ್ರರಾದರು.

ಟಾಗೋರ್ ಅವರು ತಮ್ಮ ಎಂಟನೇ ವಯಸ್ಸಿನಲ್ಲಿ ಪದ್ಯ ರಚನೆ ಆರಂಭಿಸಿದರು. ಹದಿನಾರನೇ ವಯಸ್ಸಿನಲ್ಲಿ ಅವರು ಭಾನುಶಿಂಘೊ ("ಸೂರ್ಯ ಸಿಂಹ")ಎಂಬ ಗುಪ್ತನಾಮದಡಿ ಮೊದಲ ಮಹತ್ವದ ಕವನವನ್ನು ಪ್ರಕಟಿಸಿದರು ಮತ್ತು ಅವರು ಮೊದಲು ಸಣ್ಣ ಕಥೆಗಳು ಮತ್ತು ನಾಟಕಗಳನ್ನು 1877ರಲ್ಲಿ ಬರೆದರು. ಬ್ರಿಟಿಷ್ ಆಡಳಿತವನ್ನು ಬಹಿರಂಗವಾಗಿ ಖಂಡಿಸಿದ ಟಾಗೋರ್ ಭಾರತೀಯ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದರು. ಅವರು ಜಗತ್ತಿಗೆ ನೀಡಿದ ಬಹುದೊಡ್ಡ ಗ್ರಂಥಮಾಲೆ ಮತ್ತು ಅವರು ಸ್ಥಾಪಿಸಿದ ಸಂಸ್ಥೆ ವಿಶ್ವ–ಭಾರತಿ ವಿಶ್ವಾವಿದ್ಯಾನಿಲಯ–ಇವು ಅವರ ಪ್ರಮುಖ ಕೊಡುಗೆ.


ಭಾರತೀಯ ಸಾಂಪ್ರದಾಯಕ ಶಾಸ್ತ್ರೀಯ ಕಠೋರತೆಯ ಚೌಕಟ್ಟಿನಿಂದ ಹೊರ ಬಂದ ಟಾಗೋರ್ ಬಂಗಾಳಿ ಕಲಾ ಪ್ರಕಾರಕ್ಕೆ ಹೊಸ ಮೆರಗು ನೀಡಿದರು. ಅವರ ಕಾದಂಬರಿಗಳು, ಸಣ್ಣ ಕಥೆಗಳು, ಕವನಗಳು, ನೃತ್ಯ–ನಾಟಕಗಳು, ಮತ್ತು ಪ್ರಬಂಧಗಳು ರಾಜಕೀಯ ಮತ್ತು ವೈಯಕ್ತಿಕ ವಿಷಯಗಳನ್ನೆಲ್ಲಾ ಅನುರಣಿಸಿವೆ. ಗೀತಾಂಜಲಿ (ಗೀತೆಗಳು), ಗೋರ (ಸುಂದರ ಮುಖಿ) ಮತ್ತು ಘರೇ ಬೈರೆ ((ಮನೆ ಮತ್ತು ಪ್ರಪಂಚ)) ಇವರ ಹೆಸರಾಂತ ಕೃತಿಗಳು. ಅವರು ರಚಿಸಿದ ಕವನಗಳು, ಸಣ್ಣ ಕಥೆಗಳು, ಮತ್ತು ಕಾದಂಬರಿಗಳು ಅವುಗಳ ಸಾಹಿತ್ಯಕ್ಕೆ, ಆಡುಮಾತಿನ ಪ್ರಯೋಗಕ್ಕೆ, ವಿಚಾರಶೀಲ ವಾಸ್ತವಿಕತೆಗೆ, ಮತ್ತು ತತ್ವಶಾಸ್ತ್ರದ ಅವಲೋಕನಕ್ಕೆ ಪ್ರಶಂಸನೀಯವಾಗಿವೆ. ಟಾಗೋರ್ ರಚಿಸಿದ ಎರಡು ಗೀತೆಗಳಿಗೆ ರಾಷ್ಟ್ರ ಮನ್ನಣೆ ಸಿಕ್ಕಿದೆ. 'ಜನ ಗಣ ಮನ' ಭಾರತದ ರಾಷ್ಟ್ರಗೀತೆಯಾಗಿ ಅಂಗೀಕರಿಸಲಾಗಿದೆ. 'ಅಮರ್ ಶೋನರ್ ಬಾಂಗ್ಲಾ' ಬಾಂಗ್ಲಾದೇಶದ್ದು.

ಕಾವ್ಯಕ್ಕೆ ಹೆಸರುವಾಸಿಯಾದರೂ, ಟಾಗೋರ್ ಕಾದಂಬರಿಗಳು, ಪ್ರಬಂಧಗಳು, ಸಣ್ಣ ಕಥೆಗಳು, ಪ್ರವಾಸ ಕಥನಗಳು, ನಾಟಕಗಳು, ಮತ್ತು ಸಾವಿರಾರು ಗೀತೆಗಳನ್ನೂ ರಚಿಸಿದ್ದಾರೆ. ಗದ್ಯ ಪ್ರಕಾರದಲ್ಲಿ ಟಾಗೋರ್‌ರ ಕಿರು ಕಥೆಗಳು ಅತ್ಯುತ್ಕೃಷ್ಟ ಎನಿಸಿವೆ. ಬೆಂಗಾಲಿ ಭಾಷೆಯ ಹೊಸ ಶೈಲಿಯ ಜನಕ ಎಂಬ ಕೀರ್ತಿಗೆ ಇವರು ಭಾಜನರಾಗಿದ್ದಾರೆ. ಲಯಬದ್ಧತೆ, ಆಶಾವಾದ, ಮತ್ತು ಗೇಯ ಗುಣದಿಂದಾಗಿ ಅವರ ಬರಹಗಳು ಗುರುತಿಸಲ್ಪಟ್ಟಿವೆ. ಜನ ಸಾಮಾನ್ಯರ ಜೀವನದ ಸುಲಭ ಸರಳ ವಿಷಯಗಳಿಂದ ಅವರ ಕಿರುಕಥೆಗಳ ಹಂದರ ನಿರ್ಮಿಸಲಾಗಿದೆ.

ಕಾದಂಬರಿಗಳು ಮತ್ತು ಅಕಲ್ಪಿತ ಕೃತಿ ಟಾಗೋರ್‌ರವರು ಎಂಟು ಕಾದಂಬರಿಗಳನ್ನೂ, ನಾಲ್ಕು ಕಥೆಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ – ಚತುರಂಗ, ಶೇಶರ್ ಕೋಬಿತ, ಚಾರ್ ಓಧಯ್ ಮತ್ತು ನೌಕದುಬಿ, ಘರೆ ಬೈರೆ (ಮನೆ ಮತ್ತು ವಿಶ್ವ) ಆದರ್ಶಾತ್ಮಕ ಜಮೀನ್ದಾರ್ ನಾಯಕ ನಿಖಿಲ್‌ನ ಮಾರ್ಗದರ್ಶನದ ಮೂಲಕ ಭಾರತೀಯ ರಾಷ್ಟ್ರೀಯತೆ, ಭಯೋತ್ಪಾದನೆಯ ಬೆಳವಣಿಗೆಯನ್ನು ಮತ್ತು ಸ್ವದೇಶಿ ಚಳವಳಿಯಲ್ಲಿನ ಧಾರ್ಮಿಕ ಹುರುಪನ್ನು ತೀವ್ರವಾಗಿ ಟೀಕಿಸಿದೆ; ಇದು ಟಾಗೋರ್‌ರ ಭಾವನಾತ್ಮಕ ಸಂಘರ್ಷದ ನೇರ ಅಭಿವ್ಯಕ್ತಿಯಾಗಿದೆ, ಅದು 1914ರ ಕುಸಿತದ ಶಕ್ತಿಪರೀಕ್ಷೆಯಾಗಿ ಹೊರಹೊಮ್ಮಿತು.

ಟಾಗೋರ್ ಅವರು ಸಾಂಪ್ರದಾಯಿಕತೆಯನ್ನು ಒರೆ ಹಚ್ಚಿ ನೋಡಿದರು. ಕಲ್ಕತ್ತಾದ ಸ್ಥಳೀಯ ಬಡತನದ ಬಗ್ಗೆ ಮತ್ತು ಬಂಗಾಳದ ಸಮಾಜಾರ್ಥಿಕ ಪರಿಸ್ಥಿತಿ ಕ್ಷೀಣಿಸಿದ ಬಗ್ಗೆ ಅವರು ಖೇದ ವ್ಯಕ್ತಪಡಿಸಿದರು. ಇದರಿಂದುಂಟಾದ ದುಃಖವನ್ನು ಪ್ರಾಸಬದ್ಧವಲ್ಲದ ನೂರು–ಸಾಲುಗಳ ಪದ್ಯದಲ್ಲಿ ತೋಡಿ ಕೊಂಡಿದ್ದಾರೆ. ಟಾಗೋರರ ಬರಹಗಳನ್ನೊಳಗೊಂಡ ಹದಿನೈದು ಹೊಸ ಸಂಪುಟಗಳು ಹೊರ ಬಂದವು. ಅವುಗಳಲ್ಲಿ ಪುನಶ್ಚ (1932), ಶೇಸ್ ಸಪ್ತಕ್ (1935), ಮತ್ತು ಪತ್ರಾಪುಟ್ (1936) ಗದ್ಯ–ಪದ್ಯ ರೂಪದ ಕೃತಿಗಳು. ಪ್ರಯೋಗ ಹೀಗೇ ಮುಂದುವರಿಯಿತು: ಅವರು ಗದ್ಯ ರೂಪದ ಹಾಡುಗಳನ್ನೂ ಹಾಗೂ ನೃತ್ಯನಾಟಕಗಳನ್ನೂ ಬರೆದು ಹೊಸ ಹಾದಿ ಹಾಕಿದರು. ಚಿತ್ರಾಂಗದ (1914), ಶ್ಯಾಮ (1939), ಮತ್ತು ಚಂಡಾಲಿಕಾ (1938) ಮುಂತಾದ ಅನೇಕ ನೃತ್ಯ–ನಾಟಕಗಳನ್ನು ಬರೆದರು ಮತ್ತು ದುಯ್ ಬೋನ್ (1933), ಮಲಂಚ (1934), ಮತ್ತು ಚಾರ್ ಅಧ್ಯಾಯ್ (1934) ಕಾಂದಬರಿಗಳನ್ನು ರಚಿಸಿದರು. ಜೀವಿತದ ಕೊನೆಯ ವರ್ಷಗಳಲ್ಲಿ ಟಾಗೋರ್ ವಿಜ್ಞಾನ ವಿಷಯದಲ್ಲಿ ಆಸಕ್ತಿ ತಾಳಿ ವಿಶ್ವ–ಪರಿಚಯ್ (1937) ಕೃತಿ ನೀಡಿದರು. (ಪ್ರಬಂಧಗಳ ಸಂಗ್ರಹ). ಜೀವಶಾಸ್ತ್ರ, ಭೌತಶಾಸ್ತ್ರ, ಮತ್ತು ಖಗೋಳಶಾಸ್ತ್ರದ ಬಗೆಗಿನ ಅಧ್ಯಯನ ಅವರ ಕಾವ್ಯದ ಮೇಲೆ ಪ್ರಭಾವ ಬೀರಿದವು. ನಿಸರ್ಗವಾದವನ್ನು ವ್ಯಾಪಕವಾಗಿ ಹೊಂದಿದ್ದರಿಂದಾಗಿ ವೈಜ್ಞಾನಿಕ ನಿಯಮಗಳ ಬಗ್ಗೆ ಅವರಿಗಿದ್ದ ಅಪಾರ ಆದರವನ್ನು ಎತ್ತಿ ತೋರುತ್ತದೆ. ವಿಜ್ಞಾನಿಗಳ ಕಥನವನ್ನೂ ಒಳಗೊಂಡಂತೆ, ಸೆ (1937), ತೀನ್ ಸಂಗಿ (1940), ಮತ್ತು ಗಲ್ಪಸಲ್ಪ (1941)ದಂತಹ ಸಂಪುಟಗಳಲ್ಲಿ ಅನೇಕ ಕಥೆಗಳ ಮೂಲಕ ಅವರು ವಿಜ್ಞಾನ ಪ್ರಕ್ರಿಯೆಯನ್ನು ನಿರೂಪಿಸಿದರು.

ಹೀಗೆ ತಮ್ಮ ಜೀವನವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಾಗಿರಿಸಿದ್ದರು. ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅನನ್ಯವಾದುದು. ಅವರನ್ನು ನಾವು ಸದಾ ಸ್ಮರಿಸೋಣ ಮತ್ತು ಅವರು ನಡೆದ ದಾರಿ ಯಲ್ಲಿ ನಾವೂ ನಡೆಯೋಣ ಎಂಬ ಸಂಕಲ್ಪ ಮಾಡೋಣ. ●



**ಯಾರು ಮಾನವ ಕುಲಕ್ಕೆ ಸಹಾಯ ಮಾಡಬೇಕೆಂದಿರುವಿರೋ ಅವರೆಲ್ಲಾ ಸುಖ, ದುಃಖ, ಹೆಸರು, ಕೀರ್ತಿ ಎಲ್ಲಾ ಬಗೆಯ ಆಸೆಗಳನ್ನೂ ಗಂಟುಕಟ್ಟಿ ಸಮುದ್ರಕ್ಕೆಸೆದು ಬನ್ನಿ, ಇದೇ ಎಲ್ಲಾ ಆಚಾರ್ಯರ ಉಪದೇಶ.**

**–ಸ್ವಾಮಿ ವಿವೇಕಾನಂದ**

# ಸಮಾನ ವೇತನಕ್ಕೆ ಆಗ್ರಹ

## ಕೇಂದ್ರದಂತೆ ರಾಜ್ಯ ಸರ್ಕಾರಿ ಶಾಲಾ ಶಿಕ್ಷಕರ ಹಿತ ಕಾಪಾಡಲು ಒತ್ತಾಯ

ಜೇವರ್ಗಿ: ಕೇಂದ್ರೀಯ ವಿದ್ಯಾಲಯಗಳಲ್ಲಿ ಶಿಕ್ಷಕರಿಗೆ ನೀಡುವ ವೇತನದಂತೆ ರಾಜ್ಯ ಸರ್ಕಾರ ತನ್ನ ಅಧೀನದ ಶಿಕ್ಷಕರಿಗೂ ಸಮಾನ ವೇತನ ನೀಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜೇವರ್ಗಿ ತಾಲ್ಲೂಕು ಘಟಕದ ವತಿಯಿಂದ ತಹಶೀಲ್ದಾರ್ ಬಸಲಿಂಗಪ್ಪ ನಾಯ್ಕೋಡಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ದೇಶದ ಬಹುತೇಕ ರಾಜ್ಯಗಳ ಕೇಂದ್ರ ಸರ್ಕಾರ ನಡೆಸುವ ಕೇಂದ್ರಿಯ ವಿದ್ಯಾಲಯ, ನವೋದಯ ವಿದ್ಯಾಲಯಗಳಲ್ಲಿ ಶಿಕ್ಷಕರಿಗೆ ನೀಡುವ ವೇತನವನ್ನು ರಾಜ್ಯ ಸರ್ಕಾರದ ಅಧೀನ ಶಾಲೆಗಳ ಶಿಕ್ಷಕರಿಗೂ ನೀಡುತ್ತಿದ್ದು, ಕರ್ನಾಟಕ ರಾಜ್ಯದಲ್ಲಿ ಇದನ್ನು ಜಾರಿಗೆ ತರುವಂತೆ ಮಾಧ್ಯಮಿಕ ಶಿಕ್ಷಕರು ಒತ್ತಾಯಿಸುತ್ತಾ ಬಂದರೂ ಯಾವುದೇ ಪ್ರಯೋಜನವಾಗಿಲ್ಲ. 6ನೇ ವೇತನ ಆಯೋಗ ಕರ್ನಾಟಕ ಸರ್ಕಾರಿ ನೌಕರರಿಗೂ ಶೇ 30 ರಷ್ಟು ವೇತನ ಹೆಚ್ಚಳ ಮಾಡಲು ವರದಿ ನೀಡಿದೆ ಎಂದು ಹೇಳಲಾಗುತ್ತಿದ್ದರೂ ಕೇಂದ್ರ ಹಾಗೂ ರಾಜ್ಯದ ಶಿಕ್ಷಕರ ವೇತನದಲ್ಲಿ ಶೇ. 67 ರಷ್ಟು ವ್ಯತ್ಯಾಸವಿದೆ. ಆದ್ದರಿಂದ ಶಿಕ್ಷಕರ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ನಡೆಸುವ ಶಾಲೆಗಳ ಶಿಕ್ಷಕರಿಗೆ ನೀಡುವ ವೇತನವನ್ನು ರಾಜ್ಯ ಸರ್ಕಾರ ನಡೆಸುವ ಶಾಲೆಗಳ ಶಿಕ್ಷಕರಿಗೂ ನೀಡಲು ಮನವಿಪತ್ರದ ಮೂಲಕ ಆಗ್ರಹಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ತಾಲ್ಲೂಕು ಘಟಕದ ಅಧ್ಯಕ್ಷ ಅಶೋಕ ಜೋಶಿ, ವಿಭಾಗ ಪ್ರಮುಖ ಮಹೇಶ ಬಸರಕೋಡ, ಎಸ್. ಬಸಣ್ಣ, ಬಸವರಾಜ ಹದಗಲ್, ಪಂಡಿತ ನೆಲ್ಲಗಿ, ಧನಸಿಂಗ್ ರಾಠೋಡ, ಅಮೋಘಪ್ಪ, ಮಲ್ಲಿಕಾರ್ಜುನ, ಎಸ್.ಎಸ್. ಗೊಂಬಿಮಠ, ಎಸ್.ಆರ್ ಪರಸಗೊಂಡ, ಸಿದ್ದಪ್ಪ ಕಕ್ಕಳಮೇಲಿ ಉಪಸ್ಥಿತರಿದ್ದರು.

# ತರಗತಿ 10 ಮತ್ತು 12ರ ನಂತರ ಮುಂದೇನು?

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ದಕ್ಷಿಣ ಜಿಲ್ಲಾವತಿಯಿಂದ ದಿನಾಂಕ 18.2.18ರಂದು ಹತ್ತನೇ ತರಗತಿ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ 'ವೃತ್ತಿ ಮಾರ್ಗದರ್ಶನ' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ವಿದ್ಯಾರ್ಥಿಗಳಿಗೆ ಮುಂದಿನ ಜೀವನವನ್ನು ನಿರ್ಧರಿಸುವಲ್ಲಿ ಈ ತರಗತಿಗಳು ಜೀವನದ ಪ್ರಮುಖ ಘಟ್ಟಗಳು. ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳ ಆಸೆ, ಅಭಿರುಚಿಗಳಿಗನುಗುಣವಾಗಿ ಭವಿಷ್ಯ ಜೀವನ ನಿರ್ಧಾರವಾದರೆ ಅವರ ಆತ್ಮವಿಶ್ವಾಸ ಹೆಚ್ಚಿ ಕೆಲಸದಲ್ಲಿ ಸ್ಪಷ್ಟತೆ ನಿಖರತೆ ಕಂಡುಬರುತ್ತದೆ. ಅನಿಶ್ಚಿತ ಗುರಿಯಿರುವ ವಿದ್ಯಾರ್ಥಿ ಏನನ್ನೂ ಸಾಧಿಸಲಾರ ಹಾಗೂ ಸಮಾಜಕ್ಕೆ ಹೊರೆಯಾಗುತ್ತಾನೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು "ವೃತ್ತಿಮಾರ್ಗದರ್ಶನ" ಕಾರ್ಯಕ್ರಮ ನಡೆಸಲಾಯಿತು.

ಬಸವನಗುಡಿ ಸರ್ಕಾರಿ ಪದವಿಪೂರ್ವಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀಮತಿ ನಸೀಮ ಬಾನುರವರು ಅಧ್ಯಕ್ಷರಾಗಿ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಬ್ರಿಗಿಂಗ್ ಸ್ಮೈಲ್ಸ್ ಫೌಂಡೇಷನ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಇಂಟೆಲ್‌ನ ಮಾಜಿ ಇಂಜಿನಿಯರ್ ಆದ ಸೈಯದ್ ನೂರುದ್ದೀನ್‌ರವರು ಪವರ್ ಪಾಯಿಂಟ್ ಪ್ರಸೆಂಟೇಷನ್ ನೀಡುವುದರ ಮೂಲಕ ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

ಬಸವನಗುಡಿ ಶಾಲೆ ಮತ್ತು ನ್ಯಾಷನಲ್ ಹೈಸ್ಕೂಲ್ ಬಸವನಗುಡಿ ಈ ಎರಡೂ ಶಾಲೆಯ ಸುಮಾರು 250 ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿಚಾರ ವಿನಿಮಯ ಮಾಡಿಕೊಂಡರು. ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ವಾಸುಕಿ ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಿಳಾ ವಿಭಾಗದ ಹಿರಿಯ ಕಾರ್ಯಕರ್ತೆ ಶ್ರೀಮತಿ ಆರ್. ಸೀತಾಲಕ್ಷ್ಮಿಯವರು ಹಾಗೂ ಕೆಲವು ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವರದಿ : ಆರ್.ಸೀತಾಲಕ್ಷ್ಮಿ

**ಸುಡುಮುತ್ತು**

**ಮನೆಯ ಮಾಳಿಗೆಗಲ್ಲ ಮುಡಿಯ ಕೊಪ್ಪಿಗೆಗಲ್ಲ । ಇನಿವಣ್ಣು ತನಿಯ ಕಾಳೆಂಬುದೇನಿಲ್ಲ ॥**
**ಬಣಗು ಕುರಿಚಲು ಗಿಡದ ಬಾಳೇನು? ನೀವಂತು । ಒಣಗಿದೊಡೆ ಸವುದೆ ಸರಿ ಮಂಕುತಿಮ್ಮ**

**ಮರವೊಂದು ಮನೆಯ ಮಾಳಿಗೆಯ ಹಲಗೆಯಾದೀತು, ಹೂವೊಂದು ದೇವರ ಪಾದಕ್ಕೋ ತಲೆಯ ತುರುಬನ್ನೋ ಏರೀತು, ಹಣ್ಣೊಂದು ಹಸಿವನ್ನು ಇಂಗಿಸಬಹುದು. ಆದ್ದರಿಂದ ಮಾನವ, ನಿನ್ನ ಶರೀರವು ಒಣಸೌದೆಯಂತೆ ಸುಡಲು ಮಾತ್ರ ಯೋಗ್ಯವಾಗಿರುವಾಗ ಜೀವಿತಾವಧಿಯಲ್ಲೇ ಪರೋಪಕಾರಿಯಾಗಿ ಬಾಳು.**

# ಸಮಾಜಕ್ಕೇನಾಯ್ತು?

ಹೇಳು ದೇವಾ ಈ ಸಮಾಜಕ್ಕೇನಾಯ್ತು?
ಒಂದೂ ತಿಳಿಯದಾಯ್ತು ॥

ಜಾತಿ–ಭೇದ ಹುಟ್ಟಿ ಪ್ರೀತಿ ಹೋಯ್ತು
ನೀತಿಯು ಮೊದಲೇ ಹಾಳಾಯ್ತು
ಮೌಢ್ಯ–ಭೀತಿಯಿಂದ ಜನ ನಲುಗುವಂತಾಯ್ತು ।

ಸ್ನೇಹ–ಸೌಹಾರ್ದತೆಯು ಸರಿದು
ಹೃದಯಪ್ರೇಮವು ಮುರಿದು ಬಿತ್ತು
ಮಾತಿನಮೇಲೊಂದು ಮಾತು ತೆಗೆದುಕೊಂಡೂ
ಮೋಸ ವಂಚನೆ ಬೆಳೆಯಿತು ।

ಪರರಿಷ್ಟವ ಕೇಳದೆ, ಕಷ್ಟ–ನಷ್ಟವ ನೋಡದೆ
ಭ್ರಷ್ಟರಾಜ್ಯವು ಸೃಷ್ಟಿಯಾಯ್ತು
ದ್ವೇಷವೆಂಬ ವಿಷವು ನೆತ್ತಿಗೇರಿ
ಶಾಂತಿಯು ಇಲ್ಲದಾಯ್ತು ।

ಅಜ್ಞಾನವೆಂಬ ಹಾವಳಿಯು ಹೆಚ್ಚಾಗಿ
ಮನ–ಮನಸ್ಸುಗಳ ದೂರ ಹೆಚ್ಚಾಯ್ತು
ಬಂಧು–ಬಳಗವೆಂಬ ಬಳ್ಳಿ ಹರಿದು.
ಶರಣಬಸವ ನನಗೊಂದೂ ತಿಳಿಯದಾಯ್ತು ।

– ಶರಣಪ್ಪ ಗುರಪ್ಪ ಗೊಲ್ಲರ
9980209232
ಮೃತ್ಯುಂಜಯ ನಗರ,
ಸವದತ್ತಿ ರಸ್ತೆ, ಧಾರವಾಡ–6



# ಒಗಟುಗಳು



ಹಾರಾಡುತ್ತಿರುವೆ ಗಾಳಿಪಟವಲ್ಲ ; ಬಣ್ಣ ಬಣ್ಣವುಂಟು ಕಾಮನಬಿಲ್ಲಲ್ಲ ; ಜನರು ನಮಿಸುವರು ದೇವರಲ್ಲ ; ಹಾಗಾದರೆ ನಾನ್ಯಾರು ?

ಗೂಡಿನಲ್ಲಿ ಎರಡು ಪಕ್ಷಿ ಕೂತಿದೆ. ಊರೆಲ್ಲಾ ನೋಡುತ್ತಿವೆ. ನಾಡೆಲ್ಲಾ ಸಂಚರಿಸುತ್ತಿದೆ.

ಸಾವಿರ ಕಣ್ಣಿನ ಸರದಾರನಾದರೂ ನೋಡುವುದು ಎರಡೇ ಕಣ್ಣಿನಲ್ಲಿ.

ಉತ್ತರ : (1) ಧ್ವಜ (2) ಕಣ್ಣು (3) ಗಡಿಯಾರ

## ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ

(ಪ್ರಾರೂಪ 8, ವಿಧಿ 8)

| | |
|---|---|
| ಪ್ರಕಟಣೆಯ ಸ್ಥಳ | : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಪ್ರಕಾಶಕ | : ಪ್ರಧಾನ ಕಾರ್ಯದರ್ಶಿ ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕ ಸಂಘ (ರಿ.) |
| ಮಾಲೀಕತ್ವ | : ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕ ಸಂಘ (ರಿ.) ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಸಂಪಾದಕ | : ಪ್ರಧಾನ ಕಾರ್ಯದರ್ಶಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಪ್ರಧಾನ ಕಾರ್ಯದರ್ಶಿ
1.3.2018 ಪ್ರಕಾಶಕ

## FORM IV

| | |
|---|---|
| **Place of publication** | : # 55, 'Yadavasmurthi', 1st Main, Sheshadripuram, Bengaluru -560 020 |
| **Published By** | : General Secretary Karnataka State Secondary Teachers' Association (R.) |
| **Owned By** | : Karnataka State Secondary Teachers' Association (R.) |
| **Editor** | : General Secretary |
| **Address** | : Karnataka State Secondary Teachers' Association (R.) |
| **Nationality** | : Indian |
| **Printed by** | : Rashtrotthana Mudranalaya, 'Keshava Shilpa', Kempegowda Nagar, Bengaluru -560 019 |

I, hereby declare that the particulars given above are true to the best of my knowledge and belief.

Bengaluru Sd/- General Secretary
1.3.2018 Publisher

# ಬೇಸಿಗೆ ರಜೆಯ ಸದುಪಯೋಗ ಹೇಗೆ?

ಈ ಸಂಚಿಕೆ ನಿಮ್ಮ ಕೈ–ಸೇರುವ ವೇಳೆಗೆ ವಿದ್ಯಾರ್ಥಿಗಳಿಗೆ ರಜೆಯ ಪ್ರಾರಂಭದ ಸಮಯ. ಮತ್ತೆ ಶಾಲೆ ಪ್ರಾರಂಭ ಮೇ ತಿಂಗಳ ಅಂತ್ಯಕ್ಕೇ. ಸುಮಾರು 50–60 ದಿನಗಳ ರಜೆ. ರಜೆ ಎಂದರೆ ಮಕ್ಕಳಿಗೆ ಮಜವೋ ಮಜ. ಆದರೆ ಈ ರಜಾ ದಿನಗಳು ವ್ಯರ್ಥವಾಗಬಾರದಲ್ಲ. ಕಳೆದ ಕಾಲ ಮತ್ತೆ ಬರದು. ಆ ಕಾಲವನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಸಂಗತಿಯನ್ನು ಅವಶ್ಯವಾಗಿ ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು. ಅದಕ್ಕಾಗಿ ಈ ಬರಹದಲ್ಲಿ ಒಂದೆರಡು ಸಲಹೆಗಳನ್ನು ನೀಡುತ್ತಿದ್ದೇನೆ. ದಯವಿಟ್ಟು ಇದನ್ನು ನಿಮ್ಮ ವಿದ್ಯಾರ್ಥಿಗಳಿಗೂ ಹಾಗೂ ಅವರ ಪೋಷಕರಿಗೂ ತಿಳಿಯಪಡಿಸಿರಿ.

ವಿದ್ಯಾರ್ಥಿ ಎಂದರೆ ಸದಾ ಏನನ್ನಾದರೂ ಕಲಿಯುತ್ತಿರಲೇಬೇಕೆಂಬ ಹಂಬಲವುಳ್ಳವನು. ಆದ್ದರಿಂದ ಈ ಕೆಳಗಿನ ಸಂಗತಿಗಳನ್ನು ಕಲಿಯಬಹುದು.

**1. ಸೈಕಲ್‌ಸವಾರಿ:** ವಾಹನ ಓಡಿಸುವ ವಿದ್ಯೆ ಇಂದಿನ ಕಾಲದ ತೀರ ಅಗತ್ಯತೆ. ಮುಂದೆ ಸ್ಕೂಟರ್, ಕಾರ್ ಓಡಿಸಬೇಕಾದರೂ ಸೈಕಲ್ ಸವಾರಿ ಕಲಿತಿದ್ದರೆ ತುಂಬಾ ಅನುಕೂಲವಾಗುತ್ತದೆ.

**2. ಈಜುವುದು:** ಅನುಕೂಲವಿದ್ದಲ್ಲಿ ಈಜುವುದನ್ನು ಪ್ರತಿಯೊಬ್ಬರೂ ಅವಶ್ಯವಾಗಿ ಕಲಿಯಬೇಕು. ಇದೊಂದು ಒಳ್ಳೆಯ ವ್ಯಾಯಾಮವೂ ಹಾಗೂ ಉತ್ತಮ ಕ್ರೀಡೆಯೂ ಹೌದು. ಆತ್ಮರಕ್ಷೆಯ ಸಾಧನವೂ ಹೌದು.

**3. ಅಡಿಗೆ ಮಾಡುವುದು:** ಸ್ವತಃ ಅಡಿಗೆ ಮಾಡಿ ಉಣ್ಣುವ ರುಚಿಯಲ್ಲಿ ಒಂಥರಾ ಮಜಾ ಇರುತ್ತದೆ. ಅಡಿಗೆ ಮಾಡುವುದು ಒಂದು ಕಲೆಯೂ ಹೌದು ಮತ್ತು ವಿಜ್ಞಾನವೂ ಹೌದು. ಇದಕ್ಕಾಗಿ ಬೇರೆ ತರಗತಿ ಸೇರುವ ಅಗತ್ಯವಿಲ್ಲ. ಅಡಿಗೆ ಮನೆಯೇ ಶಾಲೆ. ಅಮ್ಮನೋ ಅಕ್ಕನೋ ಕೆಲವೊಮ್ಮೆ ಅಪ್ಪನೂ ಅಧ್ಯಾಪಕನಾಗಬಹುದು.

**4. ಭಾಷಾ ಕಲಿಕೆ:** ಸಾಮಾನ್ಯವಾಗಿ ಶಾಲೆಯಲ್ಲಿ ನಾವು ಕನ್ನಡ, ಇಂಗ್ಲೀಷ್ ಮತ್ತು ಹಿಂದಿಯನ್ನು ಓದಲು ಮತ್ತು ಬರೆಯಲು ಕಲಿಯುತ್ತೇವೆ. ಆದರೆ ಈ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡಲು ಕಲಿಯುತ್ತೇವಾ? ಈ ರಜೆಯನ್ನು ನಾವು ಸದುಪಯೋಗ ಮಾಡಿಕೊಂಡು ಅದನ್ನು ಕಲಿಯಬಹುದು. ಇಷ್ಟೇ ಅಲ್ಲ ತಮಿಳು, ತೆಲುಗು ಮಲೆಯಾಳ ಇವುಗಳಲ್ಲಿ ಒಂದನ್ನಾದರೂ ಕಲಿಯಬೇಕು. ಭವಿಷ್ಯದಲ್ಲಿ ಇದು ಖಂಡಿತ ನಮಗೆ ಸಹಾಯವಾಗುವುದು.

**5. ಜ್ಞಾನಾರ್ಜನೆ:** ಶಾಲೆಯಲ್ಲಿ ನಾವು ಪಠ್ಯಪುಸ್ತಕಗಳ ಮೂಲಕ ವಿಷಯಗ್ರಹಣ ಮಾಡುತ್ತೇವೆ. ಇದರಿಂದ ನಮ್ಮ ವ್ಯಕ್ತಿತ್ವ ವಿಕಸನವಾಗುವುದಿಲ್ಲ. ಅದಕ್ಕಾಗಿ ನಾವು ಬೇರೆ ಬೇರೆ ಪುಸ್ತಕಗಳನ್ನು ಓದಬೇಕು. ಇದರಿಂದ ನಮ್ಮ ಭಾಷಾ ಜ್ಞಾನವೂ ಹೆಚ್ಚಾಗುವುದು, ವ್ಯಕ್ತಿತ್ವವೂ ರೂಪುಗೊಳ್ಳುವುದು. ಸುಲಭವಾಗಿ ಓದಬಹುದಾದ ಪುಸ್ತಕಗಳೆಂದರೆ (1) ಭಾರತ ಭಾರತಿ ಪುಸ್ತಕ ಸಂಪದ: ಇದರಿಂದ ನಮ್ಮ ದೇಶದ ನೂರಾರು ಶ್ರೇಷ್ಠ ವ್ಯಕ್ತಿಗಳ ಜೀವನ, ಅವರ ಸಾಧನೆಯ ಪರಿಚಯವಾಗುತ್ತದೆ. (2) ರಾಮಕೃಷ್ಣಾಶ್ರಮದ ಪುಸ್ತಕಗಳು ವ್ಯಕ್ತಿತ್ವ ವಿಕಸನಕ್ಕೆ ಅತ್ಯಂತ ಪೂರಕವಾದದ್ದು (3) ಪಂಚತಂತ್ರ, ಕಥಾ ಸರಿತ್ಸಾಗರ, ಈ ಸೋಪನ ಕಥೆಗಳು ಮುಂತಾದವು ನಮ್ಮ ಮನಸ್ಸನ್ನು ಉಲ್ಲಾಸಗೊಳಿಸುತ್ತವೆ.

**6. ಬಾಯಿ ಪಾಠಮಾಡುವುದು:** ನಮ್ಮ ಸ್ಮರಣ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳುವ ಸುಲಭ ಉಪಾಯವೆಂದರೆ ಬಾಯಿಪಾಠ ಮಾಡುವುದು. ಈ ರಜೆಯಲ್ಲಿ ದಿನಕ್ಕೆರಡರಂತೆ ಶ್ಲೋಕ, ಪದ್ಯಗಳನ್ನು ಬಾಯಿಪಾಠಮಾಡಿರಿ. (1) ಮಂಕು ತಿಮ್ಮನ ಕಗ್ಗದಿಂದ ಆಯ್ದದ್ದು. (2) ನೀತಿಶತಕದಿಂದ ಆಯ್ದದ್ದು. (3) 25–30 ಗಾದೆಗಳು. (4) ನಾಲ್ಕೈದು ದೇಶಭಕ್ತಿ ಗೀತೆಗಳು.

**7. ಹವ್ಯಾಸ ಅಥವಾ ಹಾಬಿ:** ಚಿತ್ರಬಿಡಿಸುವುದು, ವಾದ್ಯಗಳನ್ನು ನುಡಿಸುವುದು, ಕಥೆ–ಕವನ ಬರೆಯುವುದು, ನಟನೆ, ಇವನ್ನೆಲ್ಲಾ ಹವ್ಯಾಸ ಎನ್ನುವರು. ಬಾಲ್ಯದಲ್ಲೇ ಇದನ್ನು ರೂಢಿಸಿಕೊಂಡರೆ ಉತ್ತಮ. ಇದಕ್ಕೆ ರಜಾ ಕಾಲಕ್ಕಿಂತ ಅನುಕೂಲವಾದ ಸಮಯ ಬೇರಿಲ್ಲ.

**8. ಪ್ರವಾಸ :** 'ದೇಶಸುತ್ತು– ಕೋಶ ಓದು' ಎನ್ನುವುದು ಕನ್ನಡದ ಗಾದೆ. ಇದನ್ನೇ ಪ್ರವಾಸ ಎನ್ನುವುದು. ಇದರಿಂದ ವಿವಿಧ ಸ್ಥಳಗಳ ಪರಿಚಯ ಆಗುತ್ತದೆ. ಚರಿತ್ರೆಯ ಪಾಠಕ್ಕಿಂತ ಚರಿತ್ರೆ ನಡೆದ ಸ್ಥಳವನ್ನು ನೋಡುವುದು ಹೆಚ್ಚು ಅರ್ಥಪೂರ್ಣ. ಪ್ರವಾಸಕ್ಕೆ ತಯಾರಿಮಾಡುವುದೇ ಒಂದು ಜೀವನ ಪಾಠ. ಪರಿವಾರದೊಂದಿಗೆ, ಮಿತ್ರರೊಂದಿಗೆ ಪ್ರವಾಸ ಮಾಡುವುದರಿಂದ ಹೊಂದಾಣಿಕೆಯ ಗುಣ ಬೆಳೆಯುತ್ತದೆ. ಪ್ರವಾಸದಲ್ಲಿ ನೋಡಬೇಕಾದ್ದು (1) ಪ್ರಕೃತಿಯ ರಮಣೀಯತೆ : ಬೆಟ್ಟ, ಗುಡ್ಡ, ನದಿ, ಸಮುದ್ರ, ಜಲಪಾತ, ಕಾಡು, ಪ್ರಾಣಿಗಳು ಇತ್ಯಾದಿ. (2) ಶಿಲ್ಪಕಲೆ, ಚಿತ್ರಕಲೆ : ಉದಾ: ಬೇಲೂರು, ಹಳೇಬೀಡು, ಸೋಮನಾಥಪುರ ಇತ್ಯಾದಿ. (3) ಮ್ಯೂಸಿಯಂಗಳು : ವೆಂಕಟಪ್ಪ ಗ್ಯಾಲರಿ, ವಿಶ್ವೇಶ್ವರಯ್ಯ ವಿಜ್ಞಾನ ಮ್ಯೂಸಿಯಂ, ನೆಹರೂ ತಾರಾಲಯ ಇತ್ಯಾದಿ.

**9. ಇನ್ನಿತರೆ :** ರಜೆಯಲ್ಲಿ ನೆಂಟರಿಷ್ಟರ ಮನೆಗೆ ಹೋಗುವುದೂ ಒಂದು ಪ್ರವಾಸವೇ. ಇದರಿಂದ ನಮ್ಮ ಅಕ್ಕ. ಅಣ್ಣ, ಸೋದರಮಾವ, ಅಜ್ಜ, ಅಜ್ಜಿ ಇವರೊಂದಿಗೆ ಸಂಬಂಧ ನಿಕಟವಾಗುತ್ತದೆ. ಹೀಗೊಂದು ಪ್ರಶ್ನೆಹಾಕಿಕೊಳ್ಳೋಣ. (1) ನನಗೆಷ್ಟು ಜನ ಗೆಳೆಯರಿದ್ದಾರೆ? (2) ನನಗೆಷ್ಟು ಜನ ಸಮವಯಸ್ಕ ಸಂಬಂಧಿಗಳಿದ್ದಾರೆ (ಇವರನ್ನು ಕಸಿನ್ಸ್ ಎಂದು ಕರೆಯುತ್ತಾರೆ) (3) ಇವರೊಂದಿಗೆ ನನಗೆ ಆತ್ಮೀಯ ಸಂಬಂಧವಿದೆಯೇ? (4) ನಾನಿವರ ಮನೆಗಳಿಗೆ ಆಗಾಗ್ಗೆ ಹೋಗುತ್ತೇನೆಯೇ? (5) ಆ ಮನೆಯ ಎಲ್ಲರೂ ನನಗೆ ಪರಿಚಯವೇ? ಹಾಗೂ ಅವರಿಗೆಲ್ಲಾ ನಾನು ಪರಿಚಿತನೇ? ಈ ರಜೆಯಲ್ಲಿ ಈ ಎಲ್ಲ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಕಂಡುಕೊಳ್ಳೋಣ.

ಇನ್ನು ಕೊನೆಯದಾಗಿ ರಜೆಯನ್ನು ಉಪಯುಕ್ತವಾಗಿ ಕಳೆದ ಬಗ್ಗೆ, ಪ್ರತಿದಿನ ಒಂದು ಪುಸ್ತಕದಲ್ಲಿ ಆ ದಿನದ ದಿನಚರಿ ಬರೆಯುವುದು, ನೋಡಿದ ಸ್ಥಳಗಳ ಬಗ್ಗೆ ಒಂದು ಪುಟ್ಟ ಟಿಪ್ಪಣಿ, ಓದಿದ ಪುಸ್ತಕದ ಬಗ್ಗೆ ಒಂದು ಪುಟ ಬರೆಯುವುದು, ಭೇಟಿಯಾದವರ ಪರಿಚಯ ಬರೆಯುವುದು ಇದನ್ನೆಲ್ಲಾ ನೀವು ಮಾಡಿದರೆ ರಜೆಯನ್ನು ಸಾರ್ಥಕವಾಗಿ ಕಳೆದಂತೆ.

ಈ ಲೇಖನ ಓದಿ, ಇದರಂತೆ ಮಾಡಿ ಏಪ್ರಿಲ್ ಕೊನೆಗೆ ನಿಮ್ಮ ಅನುಭವವನ್ನು ನನಗೆ ಪತ್ರ ಬರೆದು ತಿಳಿಸುವಿರಾ? ನನ್ನ ವಿಳಾಸ ಈ ಪತ್ರಿಕೆಯ ವಿಳಾಸವೇ ಆಗಿದೆ.



**ಹೆಚ್. ನಾಗಭೂಷಣ ರಾವ್**
ನಿವೃತ್ತ ಅಧ್ಯಾಪಕ
ನ್ಯಾಷನಲ್ ಹೈಸ್ಕೂಲ್
ಬೆಂಗಳೂರು

MAG(3)NAP/230/2017-2018 Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-03-2018 Date of Posting 20th or 21st of every month

# ಚಿತ್ರ ಸುದ್ದಿ




ಜೇವರ್ಗಿ ತಾಲೂಕು ಘಟಕದ ವತಿಯಿಂದ ಜಿಲ್ಲಾಧ್ಯಕ್ಷರಿಗೆ ಮನವಿ



ಕೊಪ್ಪಳ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧ್ಯಕ್ಷರಿಗೆ ಮನವಿ



ಹತ್ತನೇ ತರಗತಿ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ 'ವೃತ್ತಿ ಮಾರ್ಗದರ್ಶನ' ಕಾರ್ಯಕ್ರಮ







ಬೆಂಗಳೂರು ಉತ್ತರ ಜಿಲ್ಲಾ ಘಟಕದ ವತಿಯಿಂದ ವಿ.ಐ.ಪಿ ಶಾಲೆ, ಟಿ.ದಾಸರಹಳ್ಳಿಯಲ್ಲಿ ಸಂಕಲ್ಪದಿನಾಚರಣೆ

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ–ಮೇಲ್‌ಗೆ ಕಳುಹಿಸಿಕೊಡಿ

IF UNDELIVERED PLEASE RETURN TO SENDER

Printed By :
General Secretary,
Karnataka State Secondary Teachers' Association (R.)
Published By:
General Secretary,
Karnataka State Secondary Teachers' Association (R.)
Owned By :
Karnataka State Secondary Teachers' Association (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka State Secondary Teachers' Association (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka State Secondary Teachers' Association(R.), Bengaluru -20

srushtidesigns@gmail.com